ವಿಜಯಪುರ | ಸಂಪುಟ 04 | ಸಂಚಿಕೆ 233 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಮಂಗಳವಾರ, ನವೆಂಬರ್ 10, 2026



"ಎಚ್ಚಿಕೆ ಒಬ್ಬ ಬೇಜವಾಬ್ದಾರಿ ಕೇಂದ್ರ ಸಚಿವ. ನನ್ನ ವಿರುದ್ಧ ಮಾಡಿರುವ ಆರೋಪ ಸಾಬೀತು ಮಾಡದಿದ್ರೆ ನಾನು ಸುಮ್ನೆ ಬಿಡಲ್ಲ. ಇದು ಎಐ ಯುಗ. ಯಾರು ಬೇಕಾದರೂ ಸುಳ್ಳು ವಾಟ್ಸ್ ಪ್ ಚಾಟ್ ಗಳನ್ನು ಸೃಷ್ಟಿ ಮಾಡಿ ಹಂಚಿಕೊಳ್ಳಬಹುದು. ಕುಮಾರಸ್ವಾಮಿ ಬಿಡುಗಡೆ ಮಾಡಿರುವ ಚಾಟ್ ನಲ್ಲಿ ಶಶಿಕಿರಣ್ ಎಂಬ ವ್ಯಕ್ತಿಯ ಹೆಸ-ರಿದೆ ಹೊರತು, ಆತ ಯಾರ ಜೊತೆ ಚಾಟ್ ಮಾಡಿದ್ದಾನೆ ಎಂಬ ವಿವರಗಳೇ ಇಲ್ಲ.

■ ಶಿವಲಿಂಗೇಗೌಡ

ಹಾಸನ ಜಿಲ್ಲಾ ಉಸ್ತುವಾರಿ ಸಚಿವರು

ಮಲಕಾರಿಸಿದ್ಧ – ಲಗಮವ್ವ ದೇವಿ ಭೇಟಿ ಸಂಪನ್ನ

ರೇವತಗಾಂವ: ಭಕ್ತಿ-ಭಂಡಾರದಲ್ಲಿ ಮಿಂದೆದ್ದ ಭಕ್ತರು

■ ಉದಯರಶ್ಮಿ ದಿನಪತ್ರಿಕೆ



ರೇವತಗಾಂವ: ಗ್ರಾಮದಲ್ಲಿ ದೀಪಾವಳಿ ಅಮವಾಸ್ಯೆಯ ನಿಮಿತ್ತ ಗ್ರಾಮದ ಮಲಕಾರಿಸಿದ್ಧ ಹಾಗೂ ಲಗಮವ್ವ ದೇವಿ ದೇವರ ಭೇಟಿ ಕಾರ್ಯಕ್ರಮವು ಶ್ರೀ ರೇವಣಸಿದ್ದೇಶ್ವರ ದೇವಾಸ್ಥಾನದ ಮುಂಭಾಗದಲ್ಲಿ ಭಂಡಾರದೊಂದಿಗೆ ರವಿವಾರದಂದು ಅದ್ದೂರಿಯಾಗಿ ಜರುಗಿತು.

ನಸುಕಿನ ಜಾವ ಮಲಕಾರಿಸಿದ್ದ ಹಾಗೂ ಲಗಮವ್ವದೇವಿ ದೇವರುಗಳಿಗೆ ವಿಶೇಷ ರುದ್ರಾಭಿಷೇಕದೊಂದಿಗೆ ಪೂಜೆ ಜರುಗಿತು. ನಂತರ ಭಕ್ತರಿಂದ ಧೀರ್ಘದಿಂಡ ನಮಸ್ಕಾರವು ನಡೆಯಿತು. ಮಧ್ಯಾಹ್ನ 1 ಗಂಟೆಯಿಂದ ಸ್ಥಳೀಯ ಕಲಾವಿದರಿಂದ ಡೊಳ್ಳಿನ ಪದಗಳು ನೆರವೇರಿದವು. ಸಾಯಂಕಾಲ 04:30 ಗಂಟೆಗೆ ಶ್ರೀ ಮಲಕಾರಿಸಿದ್ಧ ಹಾಗೂ ಲಗಮವ್ವದೇವಿ ದೇವರ ಪಲ್ಲಕ್ಕಿಗಳ ಭವ್ಯ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯ ವೈಭವದೊಂದಿಗೆ ಶ್ರೀ ರೇವಣಸಿದ್ದೇಶ್ವರ ದೇವಾಸ್ಥಾನದ ಮುಂಭಾಗ ನಾನಾ ಕಲಾವಿದರಿಂದ ಡೊಳ್ಳಿನ ವಾಲಗ ಜರುಗಿತು. ನಂತರ ಪಲ್ಲಕ್ಕಿಗಳ ಮೇಲೆ ಭಕ್ತರು ಭಂಡಾರ ತೂರುವದರೊಂದಿಗೆ ಭೇಟಿ ಜರುಗಿತು.

ಈ ಭೇಟಿ ಕಾರ್ಯಕ್ರಮವನ್ನು ನೋಡಲು ಮಹಾರಾಷ್ಟ್ರ ಸೇರಿದಂತೆ ಕರ್ನಾಟಕದ ಸಹಸ್ರಾರು ಭಕ್ತರು ಸೇರಿದ್ದರು. ಭಕ್ತವೃಂದ ದೇವರ ಪಲ್ಲಕ್ಕಿಗಳ ಮೇಲೆ ಹೂ, ಭಂಡಾರ, ಚುರುಮುರಿ, ಶೇಂಗಾ, ಖಾರೀಕ್, ಬದಾಮಿ ಹಾರಿಸಿ ತಮ್ಮ ಹರಕೆಗಳನ್ನು ತೀರಿಸಿದರು. ನಂತರ ಮಲಕಾರಿಸಿದ್ಧ ದೇವಾಸ್ಥಾನದ ಮುಂಭಾಗ ಅಮಸಿದ್ಧ ಪೂಜಾರಿ ಯವ–ರಿಂದ ನುಡಿಮುತ್ತುಗಳು ಜರುಗಿದವು.

ಮಹಾರಾಷ್ಟ್ರದ ಯೆಡ್ಶಿಯಲ್ಲಿ ದೀಪಾವಳಿ ಸಂಭ್ರಮ ಘೋರ ದುರಂತದಲ್ಲಿ ದೀಪಾವಳಿ ಸಂಭ್ರಮ ಘೋರ ದುರಂತದಲ್ಲಿ ಅಂತ್ಯ | ಹಬ್ಬದ ವೇಳೆ ಮನೆಯಲ್ಲಿ ಅಗ್ನಿ ಅವಘಡ

ಅಗ್ನಿ ದುರಂತ: ಒಂದೇ ಕುಟುಂಬದ ಆರು ಮಂದಿ ಸಾವು!



ದಾರಾಶಿವ: ಮಹಾರಾಷ್ಟ್ರದ ದಾರಾಶಿವ ಜಿಲ್ಲೆಯ ಯೆಡ್ಶಿಯಲ್ಲಿ ದೀಪಾವಳಿ ಸಂಭ್ರಮ ಘೋರ ದುರಂತದಲ್ಲಿ ಅಂತ್ಯವಾದ ಘಟನೆ ನಡೆದಿದ್ದು, ಹಬ್ಬದ ವೇಳೆ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡು ಆರು ಮಂದಿ ಸಜೀವ ದಹನವಾಗಿದ್ದಾರೆ. ಒಬ್ಬ ವ್ಯಕ್ತಿಯನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ.

ಮಧ್ಯರಾತ್ರಿಯಲ್ಲಿ ಕಾಣಿಸಿಕೊಂಡ ಬೆಂಕಿ ಮನೆಯಾದ್ಯಂತ ವೇಗವಾಗಿ ಹರಡಿ ಕೊಂಡಿದ್ದ–ರಿಂದ, ಮನೆಯಲ್ಲಿದ್ದವರು ಒಳಗೆ ಸಿಲುಕಿಕೊಂಡಿದ್ದಾರೆ. ಹೊರಬರಲು ಸಾಧ್ಯವಾಗದೆ ಉಸಿರುಗಟ್ಟಿ ಕುಟುಂಬದ ಆರು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಈ ಕುಟುಂಬವು ದಿನಸಿ ಅಂಗಡಿಯ ಮೇಲಿನ ಮಹಡಿಯಲ್ಲಿವಾಸಿಸುತ್ತಿತ್ತು.ಬೆಂಕಿ ತೀವ್ರಗೊಂಡಾಗ, ಗ್ರಾಮಸ್ಥರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಿಯಂತ್ರಿಸಲು ರಾತ್ರಿಯಿಡೀ ಶ್ರಮಿಸಿದ್ದಾರೆ.

ಗ್ರಾಮದ 75 ವರ್ಷದ ಉತ್ತಮ್ ತ್ರಿಂಬಕ್ ಎಂಬುವರು ತಮ್ಮ ಮನೆಯಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದರು. ದೀಪಾವಳಿ ಹಬ್ಬದ ಪೂಜೆ ಬಳಿಕ, ಊಟ ಮಾಡಿ ಕುಟುಂಬದ ಎಲ್ಲಾ ಸದಸ್ಯರು ಎಂದಿನಂತೆ ಮನೆಯ ಛಾವಣಿಯ ಮೇಲೆ ಮಲಗಿದ್ದರು ಎನ್ನಲಾಗಿದೆ.

ಮೃತರು ಉತ್ತಮ್ ತ್ರಿಂಬಕ್(75), ಅವರ ಪತ್ನಿ ಚಂದ್ರಕಲಾ(70), ಮಗ ಗೋವಿಂದ್(47), ಮಗಳು ಜ್ಯೋತಿ(42), ಮತ್ತು ಮೊಮ್ಮಕ್ಕಳಾದ ಗಾಯತ್ರಿ (16) ಮತ್ತು ಸಿದ್ಧಿ (15) ಎಂದು ಗುರುತಿಸಲಾಗಿದೆ.

ಬೆಂಕಿ ಅವಘಡಕ್ಕೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಆದರೆ ದೀಪ, ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ದಿನಸಿ ಅಂಗಡಿಯಲ್ಲಿನ ಯಾವುದೋ ಸುಡುವ ವಸ್ತುವಿನಿಂದ ಅವಘಡ ಸಂಭವಿಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ದೇವರಹಿಪ್ಪರಗಿಯಲ್ಲಿ ದೀಪಾವಳಿ ಹಬ್ಬದ ಸಂಭ್ರಮ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಬೆಳಕಿನ ಹಬ್ಬ ದೀಪಾವಳಿಯ ಅಮವಾಸ್ಯೆ ಪೂಜೆಯ ಅಂಗವಾಗಿ ಹೂ, ಹಣ್ಣು, ಕುಂಬಳಕಾಯಿ ಸೇರಿದಂತೆ ಪಟಾಕಿ, ಅಲಂಕಾರಿಕ ವಸ್ತುಗಳ ದರ ಹೆಚ್ಚಾಗಿದ್ದರೂ, ಮಾರಾಟ ಮಾತ್ರ ಮಂದವಾಗಿ ಕಂಡು ಬಂತು.

ಪಟ್ಟಣದಲ್ಲಿ ದೀಪಾವಳಿ ಅಮವಾಸ್ಯೆಯನ್ನು ಭಾನುವಾರ ಹಾಗೂ ಸೋಮವಾರ ಎರಡು ದಿನಗಳಂದು ಆಚರಿಸಲಾಗುತ್ತಿದೆ. ವ್ಯಾಪಾರಸ್ಥರು ತಮ್ಮ ಅಂಗಡಿ, ಮಾರಾಟ ಮಳಿಗೆಗಳ ಲಕ್ಷ್ಮಿ ಪೂಜೆಗಾಗಿ ಬಾಳೇಗಿಡ, ಕಬ್ಬು, ತೆಂಗಿನ ಪರಕೆ, ಶೃಂಗಾರ ವಸ್ತಗಳ ಸಹಿತ ಖಾತೆಪುಸ್ತಕ, ಹೂಹಣ್ಣುಗಳನ್ನು ಭಾನುವಾರ ಹಾಗೂ ಸೋಮವಾರ ಬೆಳಿಗ್ಗೆಯೇ ಖರೀದಿಸಿದರು. ಪೂಜೆಗಾಗಿ ರಾತ್ರಿ ಅಂಗಡಿ ಮಳಿಗೆಗಳನ್ನು ಹೂ–ಹಾರ, ವಿದ್ಯುತ್ ದೀಪಗಳೊಂದಿಗೆ ಸಿಂಗರಿಸಿದರು. ಹೊಸ ಬಟ್ಟೆಗಳನ್ನು ಧರಿಸಿ ಮನೆ ಮಂದಿಯೆಲ್ಲಾ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಮಹಿಳೆಯರು ವಿಶೇಷವಾಗಿ ಮುತ್ತೈದಿಯರ ಪೂಜೆಯಲ್ಲಿ ನಿರತರಾಗಿದ್ದರೆ, ಮಕ್ಕಳು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸಂಜೆ ಆರಂಭಗೊಂಡ ಪೂಜಾ ವಿಧಿವಿಧಾನಗಳು ತಡ ಮಧ್ಯರಾತ್ರಿಯವರೆಗೆ ಜರುಗಿದವು. ಸೋಮವಾರ ಸೂರ್ಯೋದಯದೊಂದಿಗೆ ಅಮವಾಸ್ಯೆ ಆರಂಭಗೊಳ್ಳುತ್ತಿದ್ದು ಮನೆಗಳಲ್ಲಿ ಲಕ್ಷ್ಮಿ ಪೂಜೆಯ ಅಂಗವಾಗಿ ಹೂ–ಹಾರಗಳನ್ನು ಖರೀದಿಸಲು ಜನ ಬೆಳಿಗ್ಗೆಯೇ ಆಗಮಿಸಿದ್ದರು. ಇದರಿಂದ ಭಾನುವಾರ ಮಾರುಕಟ್ಟೆಯಲ್ಲಿ ಜಾತ್ರೆಯಂತೆ ಜನಸಂದಣಿ ಕಂಡು ಬಂತು. ಚೆಂಡು ಹೂವು, ಶಾವಂತಿಗೆ ಹೂಗಳ ಬೆಲೆ ಕಿಲೋ ಒಂದಕ್ಕೆ 100ರಿಂದ 200 ರೂ, ಬಾಳೆದಿಂಡು ಜೋಡಿ ಒಂದಕ್ಕೆ 40–100 ರೂ, ಐದು ತರದ ಹಣ್ಣುಗಳಿಗೆ 40–250 ರೂ, ಕುಂಬಳಕಾಯಿ 50–100 ರೂ, ಹೂವಿನ ಹಾರ 40–100ರೂ, ಗಳವರೆಗೆ ಮಾರಲ್ಪಟ್ಟವು.

ಅಮವಾಸ್ಯೆ ದಿನ ಮಹಿಳೆಯರು ಸೇರಿದಂತೆ ಮನೆಯವರೆಲ್ಲರೂ ಮನೆ, ಅಂಗಡಿ, ವಾಹನಗಳನ್ನು ಹೂಗಳಿಂದ ತಳಿರು ತೋರಣಗಳನ್ನು ಸಿದ್ಧಪಡಿಸಿ ಸಿಂಗರಿಸಿದರು. ನಂತರ ಶಾಸ್ತ್ರೋಕ್ತವಾಗಿ ಲಕ್ಷ್ಮಿ ಪೂಜೆ ಕೈಗೊಂಡು ನಂತರ ಮುತ್ತೈದೆಯರಿಗೆ ಹಾಗೂ ಬಾಲಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮಗಳನ್ನು ನೆರವೇರಿಸಿದರು. ಚಿಕ್ಕ ಮಕ್ಕಳು ಹೊಸ ಬಟ್ಟೆಗಳೊಂದಿಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಕೃಷ್ಣಾ ನದಿಗೆ ಹಾರಿದ ಯುವಕ: ಸ್ನೇಹಿತರ ಸಾಹಸದಿಂದ ರಕ್ಷಣೆ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಮನನೊಂದು ಸೇತುವೆ ಮೇಲಿಂದ ಕೃಷ್ಣಾ ನದಿಗೆ ಹಾರಿದ ಯುವಕನನ್ನು ಸ್ನೇಹಿತರ ತಂಡವೊಂದು ಸಮಯಪ್ರಜ್ಞೆ ಹಾಗೂ ಸಾಹಸದಿಂದ ರಕ್ಷಿಸಿದ ಘಟನೆ ಭಾನುವಾರ ಸಂಜೆ ನಡೆದಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಢವಳೇಶ್ವರ ಗ್ರಾಮದ ಯಂಕಪ್ಪ ಸಂಗಪ್ಪ ಮೂಲಿಮನಿ (28) ರಕ್ಷಣೆಗೊಳಗಾದ ಯುವಕ.

ಸ್ನೇಹಿತರ ಬಳಗವು ಬಾಗಲಕೋಟೆಯಲ್ಲಿ ಸಿನಿಮಾ ವೀಕ್ಷಿಸಿ ಕೊಲ್ಹಾರ ಸೇತುವೆ ಮಾರ್ಗವಾಗಿ ಹಿಂದಿರುಗುತ್ತಿದ್ದ ಸಂದರ್ಭದಲ್ಲಿ, ಸೇತುವೆ ಮೇಲಿಂದ ವ್ಯಕ್ತಿಯೊಬ್ಬರು ಕೃಷ್ಣಾ ನದಿಗೆ ಹಾರುವುದನ್ನು ಗಮನಿಸಿದ್ದಾರೆ. ತಕ್ಷಣ ವಾಹನ ನಿಲ್ಲಿಸಿದ ಸ್ನೇಹಿತರು ಕ್ಷಣವೂ ತಡಮಾಡದೆ ರಕ್ಷಣಾ ಕಾರ್ಯಕ್ಕೆ ಮುಂದಾಗಿದ್ದಾರೆ. ವಾಹನದಲ್ಲಿದ್ದ ಹಗ್ಗವನ್ನು ಬಳಸಿ ನದಿಗೆ ಇಳಿದು, ನೀರಿನಲ್ಲಿ ಮುಳುಗುತ್ತಿದ್ದ ಯುವಕನನ್ನು ಸುರಕ್ಷಿತವಾಗಿ ಮೇಲಕ್ಕೆತ್ತುವಲ್ಲಿ ಯಶಸ್ವಿಯಾಗಿದ್ದಾರೆ.

ಬಳಿಕ ಯುವಕನನ್ನು ಕೊಲ್ಹಾರ ಪೊಲೀಸ್ ಠಾಣೆಗೆ ಕರೆದೊಯ್ದು ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

ಸಮಯಪ್ರಜ್ಞೆ ಮೆರೆದು ಯುವಕನ ಪ್ರಾಣ ಉಳಿಸಿದ ವಿಜಯ ಬಾಟಿ, ಪ್ರಕಾಶ್ ಮಠಪತಿ, ಶ್ರೀಶೈಲ ಚೌಡಪ್ಪನವರ, ಉದಯ ಆಲಗೊಂಡಿ ಹಾಗೂ ವಿನಯ ಮಠಪತಿ ಅವರ ಸಾಹಸ ಕಾರ್ಯಕ್ಕೆ ಕೊಲ್ಹಾರ ಪೊಲೀಸ್ ಠಾಣಾಧಿಕಾರಿ ಅಶೋಕ ನಾಯಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಾನವೀಯತೆ ಮೆರೆದ ಸ್ನೇಹಿತರ ಸಮಯೋಚಿತ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಇಂಡಿ ತಾಲೂಕು ರೈತ ಸಂಘಟನೆ ಅಧ್ಯಕ್ಷ ಸಿದ್ದಣ್ಣ ತಳವಾರ ಆರೋಪ

ಕಬ್ಬು ಬೆಲೆ ನಿಗದಿಯಲ್ಲಿ ವಿಜಯಪುರ ರೈತರಿಗೆ ತಾರತಮ್ಯ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಕಬ್ಬು ಬೆಲೆ ನಿಗದಿ ವಿಚಾರದಲ್ಲಿ ವಿಜಯಪುರ ಜಿಲ್ಲೆಯ ರೈತರನ್ನು ಕೃಷ್ಣಾ ಮತ್ತು ಭೀಮಾ ಬೆಲ್ಟ್ ಎಂದು ವಿಭಜಿಸಿ ತಾರತಮ್ಯ ಮಾಡಲಾಗಿದೆ ಎಂದು ಇಂಡಿ ತಾಲೂಕು ರೈತ ಸಂಘಟನೆ ಅಧ್ಯಕ್ಷ ಸಿದ್ದಣ್ಣ ತಳವಾರ ಆರೋಪಿಸಿದ್ದಾರೆ.

ಇಂಡಿ ತಾಲ್ಲೂಕಿನ ನಾದ ಗ್ರಾಮದಲ್ಲಿ ಪ್ರತಿಭಟಿಸಿ ಮಾತನಾಡಿದ ಅವರು, ಜಿಲ್ಲಾಧಿಕಾ–ರಿಗಳ ನೇತೃತ್ವದಲ್ಲಿ ನಡೆದ ಕಬ್ಬು ಬೆಳೆಗಾರರ ಸಭೆಯಲ್ಲಿ ರಿಕವರಿ ಸಮಸ್ಯೆ ಮುಂದಿಟ್ಟು ರೈತರ ನಡುವೆ ತಾರತಮ್ಯ ಮಾಡಲಾಗಿದೆ. ಹೀಗಾಗಿ ಸಭೆ ಸಂಪೂರ್ಣ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಲವು ರೈತ ಸಂಘಟಕರನ್ನು ಪ್ರತ್ಯೇಕವಾಗಿ ಕರೆದು ಒಳಗೊಂದು, ಹೊರಗೊಂದು ಮಾತನಾಡುವ ಮೂಲಕ ಗೊಂದಲ ಸೃಷ್ಟಿಸಲಾಗಿದೆ. ರಾಜ್ಯದ ಗುರ್ಲಾಪುರ ಹೋರಾಟಕ್ಕೆ ವಿಜಯಪುರ ಜಿಲ್ಲೆಯ ಪ್ರತಿ ತಾಲೂಕು ಹಾಗೂ ಗ್ರಾಮಗಳಿಂದ ರೈತರು ಬೆಂಬಲ ನೀಡಿದ್ದಾರೆ. ಆದರೆ ರಾಜ್ಯಾಧ್ಯಕ್ಷರು ರೈತರನ್ನು ಒಗ್ಗಟ್ಟಿನಿಂದ ಮುನ್ನಡೆಸುವ ಬದಲು ರಿಕವರಿ ಸಮಸ್ಯೆ ಮುಂದಿಟ್ಟು ಗೊಂದಲಕ್ಕೆ ಅವಕಾಶ ನೀಡಬಾರದು ಎಂದರು.

ವಿಜಯಪುರ ಜಿಲ್ಲೆಯ ರೈತರು ಪ್ರತಿವರ್ಷ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಂಕಷ್ಟ ಎದುರಿಸುತ್ತಿದ್ದು, ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಕಬ್ಬು ಬೆಳೆಗಾರರಿಗೂ ನ್ಯಾಯಯುತ ಬೆಲೆ ನೀಡಬೇಕು. ತಾರತಮ್ಯ ಮುಂದುವರಿದರೆ ಹೋರಾಟದ ಸ್ವರೂಪ ಬದಲಿಸಬೇಕಾಗುತ್ತದೆ ಎಂದು ಸಿದ್ದಣ್ಣ ತಳವಾರ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಬಸಣ್ಣ ತೊಂಟಾಪುರ, ಜಕ್ಕಪ್ಪ ನಂದಗೊಂಡ, ಬಸವರಾಜ ರೂಗಿ, ಅಂಬಣ್ಣ ವಾಲಿಕಾರ, ಗೈಬುಸಾಬ್ ನದಾಫ್, ಚೋಳಪ್ಪಗೌಡ ಬಿರಾದಾರ,ಬಸಗೊಂಡಪ್ಪ ಲಾಳಸಂಗಿ, ಬಸಣ್ಣ ರೋಡಗಿ ಸೇರಿದಂತೆ ಅನೇಕರು ಇದ್ದರು.

ಬಿ.ಎಲ್.ಡಿ.ಇ. ಡೀಮ್ಡ್ ವಿವಿ ಕುಲಾಧಿಪತಿ ಬಸನಗೌಡ ಎಂ. ಪಾಟೀಲರ ಹುಟ್ಟುಹಬ್ಬ

ನವಜಾತ ಶಿಶುಗಳಿಗೆ ಉಚಿತ ಕಿಟ್ ವಿತರಿಸಿ ಜನ್ಮದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಬಸನಗೌಡ ಎಂ. ಪಾಟೀಲರ ಹುಟ್ಟುಹಬ್ಬದ ಸಂಭ್ರಮವನ್ನು ಸಮಾಜಮುಖಿ ಚಟುವಟಿ–ಕೆಗಳೊಂದಿಗೆ ಆಚರಿಸುವ ಸದುದ್ದೇಶದಿಂದ, ಆಸ್ಪತ್ರೆಯಲ್ಲಿ ಜನಿಸಿದ ನವಜಾತ ಶಿಶುಗಳಿಗೆ ಉಚಿತ ಕಿಟ್‌ಗಳನ್ನು ವಿತರಿಸಲಾಯಿತು ಹಾಗೂ ಆಸ್ಪತ್ರೆಯ ಎಲ್ಲ ಒಳರೋಗಿಗಳಿಗೆ ಹಣ್ಣು–ಹಂಪಲುಗಳನ್ನು ವಿತರಿಸಿ ಅರ್ಥ–ಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ ಅವರು ಮಾತನಾಡಿ, ಯುವನಾಯಕ ಬಸನಗೌಡ ಎಂ. ಪಾಟೀಲ ಅವರು ಬಿ.ಎಲ್.ಡಿ.ಇ ಡೀಮ್ಡ್ ವಿವಿ ಸಂಸ್ಥೆಯನ್ನು ಜ್ಞಾನದ ಜಗತ್ತಿನಲ್ಲಿ ಉತ್ತುಂಗಕ್ಕೇರಿಸುವ ಮೂಲಕ, ವಿಜಯಪುರದ ಬಡ ಹಾಗೂ ಸಾಮಾನ್ಯ ಜನರಿಗೆ ಅತ್ಯುತ್ಕೃಷ್ಟ ವೈದ್ಯಕೀಯ ಸೇವೆಯನ್ನು ಒದಗಿಸುವ ಉದಾತ್ತ ಕನಸು ಹೊಂದಿದ್ದಾರೆ. ಅವರ ಈ ಕನಸನ್ನು ನನಸು ಮಾಡುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಸಂಸ್ಥೆಯ ಪ್ರತಿಯೊಬ್ಬ ಸಿಬ್ಬಂದಿ ಹಾಗೂ ವೈದ್ಯರು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಕರೆ ನೀಡಿದರು.

ಕುಲಸಚಿವ ಡಾ. ರಾಘವೇಂದ್ರ ಕುಲಕರ್ಣಿ ಮಾತನಾಡಿ, ಯುವನಾಯಕ ಬಸನಗೌಡ ಎಂ. ಪಾಟೀಲ ಅವರು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದಿದ್ದರೂ, ತಾಯ್ನಾಡಿನ ಸೇವೆಗಾಗಿ ವಿಜಯಪುರವನ್ನು ಆರಿಸಿಕೊಂಡಿದ್ದಾರೆ. ತಮ್ಮ ಅತ್ಯಂತ ಕಿರಿಯ ವಯಸ್ಸಿನಲ್ಲೇ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ. ವಿಜಯಪುರ ಭಾಗದ ಬಡ ಜನರಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ಮತ್ತು ಉನ್ನತ ಆರೋಗ್ಯ ಸೇವೆಯು ಕೈಗೆಟುಕುವಂತೆ ಮಾಡುವುದೇ ಅವರ ಜೀವನದ ಪ್ರಮುಖ ಧ್ಯೇಯವಾಗಿದೆ ಎಂದು ಅವರ ದೂರದೃಷ್ಟಿಯನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಪರೀಕ್ಷೆ ನಿಯಂತ್ರಣಾಧಿಕಾರಿ ಡಾ. ಶಶಿಧರ ದೇವರಮನಿ, ಪ್ರಾಂಶುಪಾಲೆ ಡಾ. ತೇಜಸ್ವಿನಿ ವಲ್ಲಭ, ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂಟೂರ, ವೈದ್ಯಕೀಯ ಉಪಅಧೀಕ್ಷಕರಾದ ಡಾ. ರವಿಕುಮಾರ ಬಿರಾದಾರ ವೈದ್ಯಕೀಯ ನಿರ್ದೇಶಕರಾದ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ಉಪಪ್ರಾಂಶುಪಾಲ ಡಾ.ಆನಂದ ಅಂಬಲಿ, ಸಂಶೋಧನ ನಿರ್ದೇಶಕರಾದ ಡಾ. ಎಂ. ಎಂ. ಪಾಟೀಲ, ಹಣಕಾಸು ಅಧಿಕಾರಿ ಬಿ. ಎಸ್. ಪಾಟೀಲ, ಉಪಕುಲಸಚಿವ ಸತೀಶ ಪಾಟೀಲ, ಪ್ರಾಧ್ಯಾಪಕ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯದ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ ಕುಲಾಧಿಪತಿಗಳಿಗೆ ಶುಭ ಕೋರಲಾಯಿತು.

ಹುಲಜಂತಿಯ ಮಾಳಿಂಗರಾಯನ ಮೇಲೆ ಸಾಕ್ಷಾತ್ ಶಿವನು-ಪಾರ್ವತಿಯರು ಮುಂಡಾಸ್ | ಹರಿದು ಬಂದ ಭಕ್ತರ ಮಹಾಪೂರ

ಭಂಡಾರದಲ್ಲಿ ಮಿಂದೆದ್ದ ಭಕ್ತ ಸಮೂಹ ಹಳದಿಮಯ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ ಮಾಳಿ

ಚಡಚಣ: ಹಾಲುಮತ ಸಮಾಜದ ಕಾಶಿ ಎಂದೇ ಪ್ರಸಿದ್ಧಿಯಾಗಿರುವ ಸಮೀಪದ ಹುಲಜಂತಿ ಗ್ರಾಮದ ಶ್ರೀ ಮಾಳಿಂಗರಾಯ ಜಾತ್ರೆಯ ಮುಂಡಾಸ್ ಹಾಗೂ ದೇವರುಗಳ ಪಲ್ಲಕ್ಕಿಗಳ ಭೇಟಿಯನ್ನು ನೋಡಲು ಭಕ್ತರ ಮಹಾಪೂರವೇ ಹರಿದು ಬಂದಿದೆ.

ರಾಜ್ಯದ ಗಡಿಯಲ್ಲಿರುವ ಮಂಗಳವೇಡಾ ತಾಲೂಕಿನ ಹುಲಜಂತಿ ಗ್ರಾಮದಲ್ಲಿ ಮಾಳಿಂಗರಾಯನು 14ನೇ ಶತಮಾನದಲ್ಲಿ ಬಾಳಿ ಬದುಕಿ, ಹಲವು ಪವಾಡಗಳನ್ನು ಮಾಡಿದ ಪವಾಡ ಪುರುಷ ಮಾಳಿಂಗರಾಯ. ಮಾಳಿಂಗರಾಯನ ಭಕ್ತಿಗೆ ಮೆಚ್ಚಿದ ಪರಶಿವನು ದೀಪಾವಳಿಯ ಅಮವಾಸ್ಯೆಯ ದಿನ ಬೀಜಗುಂತಿಯ ಹುತ್ತದ ಮೇಲೆ ಹತ್ತಿ ಬೀಜವನ್ನು ನಾಟಿ ಮಾಡಿ. ಅದು ಬೆಳದು ಹೂವಾಗಿ, ಕಾಯಾಗಿ, ಹತ್ತಿಯಾಗಿ ಒಡೆದು. ಆ ಹತ್ತಿಯನ್ನು ನೇಯ್ದು. ಮುಂಡಾಸವನ್ನು ತಯಾರು ಮಾಡಿ ಸಾಕ್ಷಾತ್ ಶಿವ–ಪಾರ್ವತಿಯರು ಕೈಲಾಸದಿಂದ ಧರೆಗಿಳಿದು ಬಂದು ಮುಂಡಾಸು ಸುತ್ತುತ್ತಾನೆ ಎಂಬುದು ಭಕ್ತರ ನಂಬಿಕೆ.

ರವಿವಾರದ ಮಧ್ಯರಾತ್ರಿ ದೀಪಾವಳಿ ಅಮವಾಸ್ಯೆಯ ನಿಮಿತ್ತ ಮಾಳಿಂಗರಾಯನ ಮುಂಡಾಸ್‌ನ್ನು ನೋಡಲು ಜನಸಾಗರ ಮಧ್ಯರಾತ್ರಿಯಲ್ಲಿಯೇ ದೇವಾಸ್ಥಾನದ ಸುತ್ತಮುತ್ತ ಉಳಿದುಕೊಂಡಿದ್ದರು. ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಭಕ್ತರು ಭಂಡಾರವನ್ನು ದೇವಾಲಯದ ಮೇಲೆ ಎಸೆಯುವುದು ಇಲ್ಲಿನ ಸಂಪ್ರದಾಯ. ಭಂಡಾರದಲ್ಲಿ ಮಿಂದೆದ್ದ ಭಕ್ತರು ತಮ್ಮ ಜೀವನ ಪಾವನವಾಯಿತು ಎಂಬುದು ಭಕ್ತರ ನಂಬಿಕೆ.

ವಿವಿಧ ರಾಜ್ಯಗಳ ಭಕ್ತರ ಆಗಮನ: ಈ ಮುಂಡಾಸು ನೋಡಲು ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಗೋವಾ ಹಾಗೂ ಉತ್ತರ ಕರ್ನಾಟಕದ ಲಕ್ಷಾಂತರ ಭಕ್ತ ಸಮೂಹ ಪಾಲ್ಗೊಂಡಿದೆ. ಈ ಮುಂಡಾಸ್ ನೋಡಲು ಸುಮಾರು 6 ಲಕ್ಷಕ್ಕೂ ಅಧಿಕ ಆಗಮಿಸಿದ ಭಕ್ತರು, ಈ ಮುಂಡಾಸ್ ಯಾವ ದಿಕ್ಕಿನೆಡೆಗೆ ವಾಲಿರುತ್ತದೆ ಎಂಬುದರ ಮೇಲೆ ಮುಂಬರುವ ರಾಜಕೀಯ, ಸಾಮಾಜಿ–ಕ ಹಾಗೂ ಮಳೆ–ಬೆಳೆಯನ್ನು ವಿಶ್ಲೇಷಿಸುವುದು ಇಲ್ಲಿನ ವಿಶೇಷ.

ದೇವರುಗಳ ಭೇಟಿ: ದೇವಾಲಯದ ಎದುರಿನ ಹಳ್ಳದ ಮೈದಾನದಲ್ಲಿ ಸೋಮವಾರದಂದು ಸಾಯಂಕಾಲ 3 ಗಂಟೆಗೆ ಮಾಳಿಂಗರಾಯನ ಭೇಟಿ ಕಾರ್ಯಕ್ರಮದಲ್ಲಿ ಶಿರಾಡೋಣದ ಬೀರಲಿಂಗೇಶ್ವರ, ಏಣಕಿ ಜಕರಾಯ, ಹುನ್ನೂರು ಬೀರಲಿಂಗೇಶ್ವರ ದೇವರುಗಳ ಪಲ್ಲಕ್ಕಿಗಳು ಸೇರಿದಂತೆ 30ಕ್ಕೂ ಹೆಚ್ಚು ದೇವರುಗಳ ಪಲ್ಲಕ್ಕಿಗಳು ಸೇರಿದಂತೆ ಕಂಟಲು ಎತ್ತುಗಳು ದೇವಾಲಯದ ಎದುರಿನ ಹಳ್ಳದ ಮೈದಾನದಲ್ಲಿ ಭಾಗಿಯಾಗುತ್ತವೆ. ಮಾಳಿಂಗರಾಯನ ಭೇಟಿಯ ವೇಳೆಯಲ್ಲಿ ಭಕ್ತರು ಭಂಡಾರ, ಖಾರಿಕ್, ಬದಾಮಿ ಹಾಗೂ ಉಣ್ಣೇ ಉತ್ಪತ್ತಿಯನ್ನು ಹಾರಿಸುವ ಮೂಲಕ ಭಕ್ತರು ತಮ್ಮ ಹರಿಕೆಗಳನ್ನು ತೀರಿಸುವುದು ವಾಡಿಕೆ. ಈ ವೇಳೆಯಲ್ಲಿ ಭಕ್ತರು ಭಂಡಾರದಲ್ಲಿ ಮಿಂದೇದ್ದ ಭಕ್ತ ಸಮೂಹವು ಹಳದಿಮಯವಾಗಿರುವುದು ಕಂಡುಬಂತು.

ಇನ್ನು ಜಾತ್ರೆಯಲ್ಲಿ ಕನ್ನಡ, ಮರಾಠಿ ನಾಟಕಗಳು, ಡೊಳ್ಳಿನ ಹಾಡಿಕೆ, ತಮಾಶ್ಯಾ, ಸರ್ಕಸ್ ಹೀಗೆ ಹಲವು ಬಗೆಯ ಮನರಂಜನೆ ಕಾರ್ಯಕ್ರಮಗಳು ಯಾತ್ರಿಕರನ್ನು ಆಕರ್ಷಿಸುತ್ತಿವೆ.

ಸಾರಿಗೆ ವ್ಯವಸ್ಥೆ

ದೀಪಾವಳಿ ಹಬ್ಬ ಹಾಗೂ ಹುಲಜಂತಿ ಮಾಳಿಂಗರಾಯ ಜಾತ್ರೆಯ ನಿಮಿತ್ತ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಸೇರಿದಂತೆ ಇತರ ಸಾರಿಗೆ ನಿಗಮದಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ತಾಲೂಕು ಹಾಗೂ ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗಿದೆ.



ವಿಕಸಿತಭಾರತ ಯುವ ಸಂಸತ್ ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ



ಕಲಬುರಗಿ: ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಭಾರತ ಸರ್ಕಾರ, ಕಲಬುರಗಿ ಜಿಲ್ಲಾ ಆಯೋಜಿಸಿದ ವಿಕಸಿತ ಭಾರತ ಯುವ ಸಂಸತ್ ಭಾಷಣ ಸ್ಪರ್ಧೆಯಲ್ಲಿ ಶರಣಬಸವೇಶ್ವರ ಪದವಿ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿನಿ ಫೈಜಾ ಖಾನಂ ದ್ವಿತೀಯ ಸ್ಥಾನ ಪಡೆದಿದ್ದಾರೆ.

ನಗರದ ಶಾರದವಿವೇಕ ಪದವಿ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ವಿದ್ಯಾರ್ಥಿ ಈ ಸಾಧನೆ ಮಾಡಿದ್ದಾರೆ. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ದಶರಥ ಮೇತ್ರೆ ,ಡಾ.ವಿಜಯಲಕ್ಷ್ಮೀ ಮತ್ತು ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

ಮಕ್ಕಳು ಓದಿನ ಜೊತೆಗೆ ದೈಹಿಕ, ಬೌದ್ಧಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸಬೇಕು: ಉಪ ನಿರ್ದೇಶಕ ರಾಜಕುಮಾರ ರಾಠೋಡ

ಕಲಬುರಗಿ :ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ಇಂತಹ ದೈಹಿಕ ಹಾಗೂ ಬೌದ್ಧಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸುವಂತೆ ಶಿಕ್ಷಕರು ಹಾಗೂ ಪಾಲಕರು ಪ್ರೋತ್ಸಾಹಿಸಬೇಕು ಎಂದು ಕಲಬುರಗಿ ಜಿಲ್ಲಾ ಬಾಲಭವನ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ ಅವರು ಹೇಳಿದರು.

ಅವರು ಗುರುವಾರ ಕಲಬುರಗಿ ನಗರದ ಆಳಂದ ಕಾಲೋನಿಯ ಬಾಲಕಿಯರ ಬಾಲಮಂದಿರದಲ್ಲಿ ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ 'ಕಲಾಶ್ರೀ ಪ್ರಶಸ್ತಿಗಾಗಿ, ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆ ಪ್ರಯುಕ್ತ ವಿವಿಧ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳು ಜಿಲ್ಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು, ರಾಜ್ಯ ಮಟ್ಟದಲ್ಲಿಯೂ ಪ್ರಶಸ್ತಿಯನ್ನು ಪಡೆದುಕೊಳ್ಳಬೇಕು ಎಂದು ಮಕ್ಕಳಲ್ಲಿ ಉತ್ಸಾಹ ತುಂಬಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಜೇರಿ ಅವರು ಮಾತನಾಡಿ,ಮಕ್ಕಳಲ್ಲಿ ಕಲೆಯನ್ನು ಗುರುತಿಸುವುದಕ್ಕೆ ಇಂತಹ ವೇದಿಕೆ ತುಂಬಾ ಉಪಯೋಗವಾಗುತ್ತದೆ.



ಪಾಲಕರು ಮಕ್ಕಳಲ್ಲಿನ ಆಸಕ್ತಿಯನ್ನು ತಿಳಿದುಕೊಂಡು ಹುರಿದುಂಬಿಸಬೇಕೇ ಹೊರತು ಕುಗ್ಗಿಸುವ ಕೆಲಸ ಮಾಡಬಾರದು. ಜಿಲ್ಲಾ ಬಾಲ ಭವನವು ತುಂಬಾ ಒಳ್ಳೆಯ ಕೆಲಸ ಮಾಡುತ್ತಿದೆ. ಇದರಿಂದ ಮಕ್ಕಳ ಸರ್ವೋತ್ತಮ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 09 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗಾಗಿ ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ ಹಾಗೂ ವಿಜ್ಞಾನದಲ್ಲಿ ನೂತನ ಆವಿಷ್ಕಾರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಸ್ಥಳೀಯರು, ತಾಲ್ಲೂಕಿನವರು ಹಾಗೂ ಅಂಧ ಮಕ್ಕಳು ಸೇರಿ ಒಟ್ಟು 260 ಮಕ್ಕಳು ಭಾಗವಹಿಸಿದ್ದರು. 08 ಜನ ತೀರ್ಪುಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಿದರು. ಬೆಂಗಳೂರಿನ ಕರ್ನಾಟಕ ರಾಜ್ಯ ಬಾಲಭವನ ಸೊಸೈಟಿಯ ಉಪಾಧ್ಯಕ್ಷ ಅನಿಲ ಜಮಾದಾರ ಅವರು ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನವನ್ನು ವಿತರಿಸಿದರು.

ಈ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶಿವಶರಣಪ್ಪಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಪ್ರಭಾರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಲ್ಲಣ್ಣ ದೇಸಾಯಿ, ಅಧೀಕ್ಷಕರು ಶಿಲ್ಪಾ ಹಿರೇಮಠ, ಪ್ರ.ದ.ಸ ಏಜಾಜ ಅಹ್ಮದ, ಇಲಾಖೆಯ ಸಿಬ್ಬಂದಿ ಪ್ರೇಮಾ ಸುತಾರ್, ಸಂಪನ್ಮೂಲ ವ್ಯಕ್ತಿಗಳು, ಬಾಲಕಿಯರ ಬಾಲ ಮಂದಿರದ ಸಿಬ್ಬಂದಿ, ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಜಿಲ್ಲಾ ಮಿಷನ್ ಸಂಯೋಜಕಿ ವಿಜಯಲಕ್ಷ್ಮಿ ಜಾಧವ್ ಕಾರ್ಯಕ್ರಮ ನಿರೂಪಿಸಿದರು ಹಾಗೂ ಜಿಲ್ಲಾ ಬಾಲಭವನ ಸಂಯೋಜಕಿ ಮಾನು ಹುಗಾರ್ ವಂದಿಸಿದರು.

ಮಕ್ಕಳಿಗೆ ಸೂಕ್ತ ರಕ್ಷಣೆ, ಪೌಷ್ಟಿಕ ಆಹಾರ ನೀಡಿ ಬೆಳೆಸುವುದು ಅಗತ್ಯ



ಕಲಬುರಗಿ: ಮಕ್ಕಳು ದೇಶದ ಸಂಪತ್ತು. ಇಂದಿನ ಮಕ್ಕಳೆ, ನಾಳಿನ ದೇಶದ ಯುವ ಸಂಪತ್ತು ಮತ್ತು ನಾಗರಿಕರು. ಅವರನ್ನು ಎಲ್ಲಾ ಕಾಯಿಲೆಗಳಿಂದ ರಕ್ಷಿಸುವುದು, ಕಾಲ–ಕಾಲಕ್ಕೆ ಲಸಿಕೆಗಳು ಕೊಡಿಸುವುದು, ಪಾಲನೆ–ಪೋಷಣೆ ಮಾಡುವುದು, ಪೌಷ್ಟಿಕ ಆಹಾರ ನೀಡಿ ಸುರಕ್ಷಿತವಾಗಿ ಬೆಳೆಸುವುದು ಪ್ರತಿಯೊಬ್ಬ ಪಾಲಕ–ಪೋಷಕರ ಆದ್ಯ ಕರ್ತವ್ಯವಾಗಿದೆ ಎಂದು ಮಕ್ಕಳ ತಜ್ಞ ವೈದ್ಯ ಡಾ.ಗೌಡಪ್ಪ ಆರ್.ಪಾಟೀಲ ಸಲಹೆ ನೀಡಿದರು.

ನಗರದ ಶಹಾಬಾದ್ ರಿಂಗ ರಸ್ತೆಯ ಪ್ರಶಾಂತ ನಗರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ಸಹಯೋಗದೊಂದಿಗೆ ಜರುಗಿದ 'ರಾಷ್ಟ್ರೀಯ ಮಕ್ಕಳ ಸುರಕ್ಷತಾ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. 5 ವರ್ಷಗಳೊಳಗಿನ ಮಕ್ಕಳಿಗೆ ತಪ್ಪದೆ ಪೋಲಿಯೋ ಹನಿಯನ್ನು ಹಾಕಿಸಬೇಕು. ಅಲ್ಲದೆ ವಯಸ್ಸಿಗೆ ತಕ್ಕಂತೆ ಸೂಕ್ತ ಕಾಲಕ್ಕೆ ಮಕ್ಕಳಿಗೆ ಬಿ.ಸಿಜಿ, ಹೆಪಟೈಟಿಸ್, ಓ.ಪಿ.ಓ–0,1,2,3, ಪೆಂಟಾವೆಲೆಂಟ್ 1,2,3, ಆಯ್.ಪಿ.ವಿ ಲಸಿಕೆ 1,2, ದಡಾರ–1, ವಿಟಾಮಿನ್–ಎ ದ್ರಾವಣ, ಡಿಪಿಟಿ, ಮೆದಳು ಜ್ವರದ ಲಸಿಕೆ, ಟಿ.ಟಿ ಸೇ–ರಿದಂತೆ ಮುಂತಾದ ಲಸಿಕೆಗಳನ್ನು ನೀಡಬೇಕು. ಮಗುವಿಗೆ ತಾಯಿಯ ಎದೆಹಾಲನ್ನು ತಪ್ಪದೆ ನೀಡಬೇಕು. ದ್ರವ ಆಹಾರ, ಹಣ್ಣು ಸೇರಿದಂತೆ ಸಮತೋಲಿತ ಆಹಾರವನ್ನು ನೀಡಬೇಕು. ಜಂತು ಹುಳಗಳಾಗದಂತೆ ಆಲ್ಬೆಂಡಾ ಜೋಲ್ ಮಾತ್ರೆಗಳನ್ನು ನೀಡಬೇಕು. ಎಣ್ಣೆಯಲ್ಲಿ ಕರಿದ, ಹುರಿದ ಆಹಾರವನ್ನು ನೀಡಬಾರದು. ಮಕ್ಕಳು ಮೊಬೈಲ್ ವೀಕ್ಷಣೆ ಮಾಡುವುದು ಬೇಡ ಎಂದು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಅನೇಕ ಸಲಹೆ–ಸೂಚನೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಸಮಾಜ ಸೇವಕ ಎಚ್.ಬಿ.ಪಾಟೀಲ, ಪ್ರಮುಖರಾದ ಶಿವಯೋಗೆಪ್ಪಾ ಎಸ್.ಬಿರಾದಾರ, ಸಿದ್ದು ಪಾಟೀಲ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಅತಿಥಿ ಉಪನ್ಯಾಸಕರ ಬದುಕಿನೊಂದಿಗೆ ಚೆಲ್ಲಾಟ ಬೇಡ; ಟಿಡಿಎಸ್ ತೆರಿಗೆ ವಿಧಿಸುವ ನಿರ್ಧಾರವನ್ನು ಸರ್ಕಾರ ತಕ್ಷಣ ಕೈಬಿಡಲಿ: ಶಶೀಲ್ ಜಿ ನಮೋಶಿ



ಕಲಬುರ್ಗಿ :ಅತಿಥಿ ಉಪನ್ಯಾಸಕರಿಗೆ ಆರ್ಥಿಕ ಭದ್ರತೆ ನೀಡಬೇಕಾದ ಸರ್ಕಾರವೇ ಅವರ ಬದುಕಿಗೆ ತೆರಿಗೆ ಹೊರೆ ಹೊ–ರಿಸುವುದು ಎಷ್ಟು ಸರಿ ಎಂದು ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ ಸರಕಾರಕ್ಕೆ ಪ್ರಶ್ನಿಸಿದ್ದಾರೆ

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಅತ್ಯಂತ ಕಡಿಮೆ ಗೌರವಧನಕ್ಕೆ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಮೇಲೆ ಟಿಡಿಎಸ್ (ಮೂಲದಲ್ಲಿಯೇ ತೆ–ರಿಗೆ ಕಡಿತ) ವಿಧಿಸುವ ಕ್ರಮ ಅತ್ಯಂತ ಖಂಡನೀಯವಾಗಿದೆ. ಈಗಾಗಲೇ ಕಡಿಮೆ ಗೌರವಧನದಲ್ಲಿ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ, ಮನೆ ಬಾಡಿಗೆ ಸೇರಿದಂತೆ ದಿನನಿತ್ಯದ ಬದುಕಿನ ಅಗತ್ಯಗಳನ್ನು ಪೂರೈಸಲು ಪರದಾಡುತ್ತಿರುವ ಅತಿಥಿ ಉಪನ್ಯಾಸಕರ ಮೇಲೆ ಮತ್ತೊಂದು ಆರ್ಥಿಕ ಹೊರೆ ಹೇರುವುದು ಯಾವ ನ್ಯಾಯ?

ಅತಿಥಿ ಉಪನ್ಯಾಸಕರು ಯಾವುದೇ ಐಷಾರಾಮಿ ಜೀವನ ನಡೆಸುತ್ತಿಲ್ಲ. ತಮ್ಮ ಜ್ಞಾನ, ಅನುಭವ ಮತ್ತು ಪರಿಶ್ರಮವನ್ನು ಧಾರೆ ಎರೆಯುತ್ತಾ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಆದರೆ ಅವರ ಸೇವೆಗೆ ತಕ್ಕ ಗೌರವ, ಉದ್ಯೋಗ ಭದ್ರತೆ ಮತ್ತು ಸಮರ್ಪಕ ವೇತನ ನೀಡುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ತೋ–ರಿಸುತ್ತಿವೆ. ಇಂತಹ ಸಂದರ್ಭದಲ್ಲಿ ಅವರ ಅಲ್ಪ ಗೌರವಧನದಲ್ಲಿಯೇ ಟಿಡಿಎಸ್ ಕಡಿತಗೊಳಿಸುವ ಕ್ರಮ ಅವರ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಒಂದೆಡೆ ಅತಿಥಿ ಉಪ ನ್ಯಾಸಕರಿಗೆ ಕಾಯಂ ಉದ್ಯೋಗದ ಭದ್ರತೆ ಇಲ್ಲ, ಮತ್ತೊಂದೆಡೆ ಸೇವಾ ಭದ್ರತೆ ಹಾಗೂ ನಿವೃತ್ತಿ ಸೌಲಭ್ಯಗಳಿಲ್ಲ. ಪ್ರತಿವರ್ಷ ನೇಮಕಾತಿ ಮತ್ತು ಸೇವಾ ಮುಂದುವರಿಕೆಯ ಆತಂಕದಲ್ಲಿಯೇ ಬದುಕುತ್ತಿರುವ ಈ ಶಿಕ್ಷಕ ಸಮುದಾಯಕ್ಕೆ ಸರ್ಕಾರ ಮಾನವೀಯತೆಯ ಆಧಾರದಲ್ಲಿ ಸ್ಪಂದಿಸಬೇಕಾಗಿದೆ. ಟಿಡಿಎಸ್ ಕಡಿತದಿಂದ ಅವರ ಆದಾಯದ ಮೇಲೆ ಉಂಟಾಗುವ ಪರಿಣಾಮ ಮತ್ತು ಬಿಪಿಎಲ್ ಪಡಿತರ ಚೀಟಿಗೆ ಸಂಬಂಧಿಸಿದಂತೆ ಉದ್ಭವಿಸಿರುವ ಆತಂಕಗಳ ಬಗ್ಗೆಯೂ ಸರ್ಕಾರ ಸ್ಪಷ್ಟನೆ ನೀಡಬೇಕು.

ಶಿಕ್ಷಕರನ್ನು ಗೌರವಿಸುವುದು ಕೇವಲ ಭಾಷಣಗಳಿಗೆ ಸೀಮಿತವಾಗಬಾರದು. ಅವರ ಬದುಕಿನಲ್ಲಿ ಆರ್ಥಿಕ ನೆಮ್ಮದಿ ಮೂಡಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಂಡು ಅವರ ಬದುಕಿನ ಸಂಕಷ್ಟಗಳಿಗೆ ಕಣ್ಣುಮುಚ್ಚುವುದು ಸರಿಯಲ್ಲ.

ನನ್ನ ಪ್ರಮುಖ ಆಗ್ರಹಗಳು: ಅತಿಥಿ ಉಪನ್ಯಾಸಕರ ಗೌರವಧನದಲ್ಲಿ ಟಿಡಿಎಸ್ ಕಡಿತಗೊಳಿಸುವ ಕ್ರಮವನ್ನು ಮರುಪರಿಶೀಲಿಸಿ, ಅವರಿಗೆ ಅನಗತ್ಯ ಆರ್ಥಿಕ ಹೊರೆಯಾಗದಂತೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಟಿಡಿ–ಎಸ್ ಕಡಿತದಿಂದ ಬಿಪಿಎಲ್ ಪಡಿತರ ಚೀಟಿಯ ಅರ್ಹತೆಯ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದರ ಕುರಿತು ಸರ್ಕಾರ ಅಧಿಕೃತ ಸ್ಪಷ್ಟನೆ ನೀಡಬೇಕು.

ಅತಿಥಿ ಉಪನ್ಯಾಸಕರಿಗೆ ಕನಿಷ್ಠ ಗೌರವಯುತ ವೇತನ, ಸೇವಾ ಭದ್ರತೆ ಹಾಗೂ ಇತರ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಅತಿಥಿ ಉಪನ್ಯಾಸಕರ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಅವರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ಅತಿಥಿ ಉಪನ್ಯಾಸಕರು ಸರ್ಕಾರದ ಮೇಲೆ ಹೊರೆ ಅಲ್ಲ; ಅವರು ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗ. ಅವರ ಶ್ರಮದಿಂದ ಸಾವಿರಾರು ವಿದ್ಯಾರ್ಥಿಗಳ ಬದುಕು ಬೆಳಗುತ್ತಿದೆ. ಅಂತಹ ಶಿಕ್ಷಕರ ಬದುಕನ್ನೇ ಕತ್ತಲೆಗೆ ತಳ್ಳುವ ಯಾವುದೇ ಕ್ರಮವನ್ನು ಸಹಿಸಲು ಸಾಧ್ಯವಿಲ್ಲ.

ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಅತಿಥಿ ಉಪನ್ಯಾಸಕರ ಹಿತ ಕಾಪಾಡಬೇಕು. ಅವರ ನ್ಯಾಯಯುತ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಶಿಕ್ಷಕ ಸಮುದಾಯದ ಪರವಾಗಿ ಸದನದ ಒಳಗೂ ಹೊರಗೂ ಧ್ವನಿ ಎತ್ತುವುದು ನನ್ನ ಕರ್ತವ್ಯವಾಗಿದೆ.ಎಂದು ಹೇಳಿದರು

ಪಟಾಕಿ ಮಾರಾಟ ಅಂಗಡಿಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದಕ್ಕೆ ನಿಷೇಧ

ಕಲಬುರಗಿ :ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗಿರುವ ಪಟಾಕಿ ಮಾರಾಟ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳದಂತೆ ಸೂಚನೆ ನೀಡಲಾಗಿದೆ ಎಂದು ಕಲಬುರಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರಾದ ಮೊಹಮ್ಮದ್ ಬಷೀರ್ ಅನ್ಸಾರಿ ಅವರು ತಿಳಿಸಿದ್ದಾರೆ.


ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದ್ದು, ಪಟಾಕಿ ತಯಾರಿಕೆ, ಮಾರಾಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ವ್ಯಾಪ್ತಿಗೆ ಬರುವುದರಿಂದ ಈ ಅಂಗಡಿಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದು ನಿಷೇಧಿಸಲಾಗಿದೆ. ಒಂದು ವೇಳೆ ಪಟಾಕಿ ಮಳಿಗೆಗಳಲ್ಲಿ ಅಥವಾ ತಯಾರಿಕಾ ಘಟಕಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಂಡಿರುವುದು ಕಂಡುಬಂದರೆ, ಸಂಬಂಧಪಟ್ಟ ಮಾಲೀಕರ ವಿರುದ್ಧ ಬಾಲಕಾರ್ಮಿಕ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ.

ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016 ನ್ನು ಜಾರಿಗೆ ತರಲಾಗಿದೆ. ಈ ಕಾಯ್ದೆಯನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. 14 ರಿಂದ 18ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.


ನಯ, ವಿನಯ, ಸಜ್ಜನಿಕೆ ಸೌಜನ್ಯದಿಂದ ಖಂಡಿತ ಯಶಸ್ಸು ಸಾಧ್ಯ : ಸಿಪಿಐ ಮಹಾದೇವಪ್ಪ ದಿಡ್ಡಿಮನಿ

ಸೇಡಂ: ವಿದ್ಯಾರ್ಥಿಗಳು ನಯ, ವಿನಯ, ಸಜ್ಜನಿಕೆ ಸೌಜನ್ಯದೊಂದಿಗೆ ಪ್ರಯತ್ನ ಮಾಡಿದರೆ ಖಂಡಿತ ಯಶಸ್ಸು ಸಾಧ್ಯ ಎಂದು ಸಿಪಿಐ ಮಹಾದೇವಪ್ಪ ದಿಡ್ಡಿಮನಿ ಅಭಿಪ್ರಾಯ ಪಟ್ಟರು ಪಟ್ಟಣದಲ್ಲಿರುವ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸೇಡಮ್ ಆಯೋಜಿತ ವಿವಿಧ ಪ್ರಕಲ್ಪಗಳ ಅಂತರ್ ಶಾಲಾ ಕ್ರೀಡಾಕೂಟವು ಇಂದು ವಿದ್ಯಾಮಂದಿರ ಸಿಬಿಎಸ್ಸಿ ಶಾಲೆಯಲ್ಲಿ ಉದ್ಘಾಟಿಸಿ ಅವರು ಮಾತನಾಡಿದ ಅವರು ವಿದ್ಯಾರ್ಥಿಗಳಾದ ನಾವು ಎಲ್ಲಾ ಕ್ರೀಡೆಗಳನ್ನು ಆನಂದಿಸುವವರಾಗಬೇಕು ಹಾಗೂ ಯೋಗ್ಯತೆ ಮತ್ತು ಪ್ರತಿಭೆಯು ಯಾರ ಸ್ವತ್ತು ಅಲ್ಲ. ನಾವು ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟಾಗ ಮಾತ್ರ ಅದು ನಮ್ಮ ಸ್ವತ್ತಾಗುತ್ತದೆ ಎಂದರು.ಕ್ರೀಡಾಕೂಟದ ಅಧ್ಯಕ್ಷತೆ ವಹಿಸಿದ ಶಿಕ್ಷಣ ಸಮಿತಿಯ ಸಂರಕ್ಷಕರಾದ ಶ್ರೀ ಬಸವರಾಜ್ ಪಾಟೀಲ್ ಅವರು ಅಧ್ಯಕ್ಷೀಯ ಮಾತುಗಳಲ್ಲಿ ವಿದ್ಯಾರ್ಥಿ ಹಂತದಿಂದಲೇ ಗುರು ವೃಂದದವರು ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ನಿರಂತರವಾಗಿ ತುಂಬಬೇಕು ಮತ್ತು ಸತ್ಯದ ಮೇಲೆ ಬೆಳವಣಿಗೆ ಕಾಣುವ ಮಕ್ಕಳಾಗಬೇಕೆಂದರು. ವಿದ್ಯಾ ಮಂದಿರ ಸಿಬಿಎಸ್ ಶಾಲೆಯ ಪ್ರಾಚಾರ್ಯಶ್ರೀಮತಿ ಶೋಭಾರಾಣಿ ಪಾಟೀಲ್ ಅವರು ಪ್ರಸ್ತಾವಿಕ ಮಾತುಗಳಾಡಿದರು.ವಿದ್ಯಾರ್ಥಿನಿ ಕು.ಪ್ರಜ್ಞಾ ನಿರೂಪಣೆ, ಸ್ವಾಗತ: ಶಾರೀರಿಕ ನಿರ್ದೇಶಕರಾದ ಭೀಮಶಂಕರ್ ಮಠಪತಿ, ಶ್ರೀಮತಿ ಶೋಭಾ ಅಂಬಿಗೇರ್ ದೈಹಿಕ ನಿರ್ದೇಶಕರು ವಂದನಾ ರ್ಪಣೆಗೈದರು.ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಸಮಿತಿಯ ಅಧ್ಯಕ್ಷರಾದ ಪೂಜ್ಯ ಶ್ರೀ ಡಾ ಸದಾಶಿವ ಶ್ರೀಗಳು, ಅತಿಥಿಗಳಾದ ಸತ್ಯಕುಮಾರ ಬಾಗೋಡಿ, ಅನಿಲಕುಮಾರ ಮಾಲಪಾಣಿ ಮತ್ತು ಭೀಮಾಶಂಕರ ಮಠಪತಿ ಅವರು ಪ್ರಮಾಣ ಪತ್ರ ವಿತರಿಸಿದರು.

ಭಾರತದ ರಾಜಕೀಯ ಇತಿಹಾಸದಲ್ಲಿ ಎಲ್.ಕೆ. ಅಡ್ವಾಣಿ!



ಎಲ್.ಕೆ. ಅಡ್ವಾಣಿ ಅವರ ಜನ್ಮಶತಮಾನೋತ್ಸವ ವರ್ಷದ ಆರಂಭ







ಸಿದ್ಧಲಿಂಗ ಚೌಧರಿ.
ಶಿಕ್ಷಕರು
ಸಿಂದಗಿ – ವಿಜಯಪುರ ಜಿಲ್ಲೆ

■ **ಉದಯರಶ್ಮಿ ದಿನಪತ್ರಿಕೆ**

ಜನಸಂಘದಕಾರ್ಯಕರ್ತನಿಂದದೇಶದಉಪಪ್ರಧಾನಿಯವರೆಗೆ ಸಾಗಿ, ಭಾರತೀಯ ರಾಜಕೀಯದಲ್ಲಿ ಮಹತ್ವದ ಬದಲಾವಣೆಗಳಿಗೆ ಕಾರಣರಾದ ಭಾರತ ರತ್ನ ಲಾಲ್‌ಕೃಷ್ಣ ಅಡ್ವಾಣಿಯವರ ಬದುಕಿನ ಪಯಣ.

ರಾಜಕೀಯವೆಂದರೆ ಕೇವಲ ಅಧಿಕಾರ ಹಿಡಿಯುವ ಹೋರಾಟವಲ್ಲ. ಅದು ಸಿದ್ಧಾಂತ, ಸಂಘಟನೆ, ಜನಸಂಪರ್ಕ ಮತ್ತು ನಿರಂತರ ಪರಿಶ್ರಮದ ಪಯಣವೂ ಹೌದು. ಈ ಎಲ್ಲ ಆಯಾಮಗಳಲ್ಲಿ ಭಾರತದ ರಾಜಕೀಯ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನ ಪಡೆದ ನಾಯಕರಲ್ಲಿ ಲಾಲ್‌ಕೃಷ್ಣ ಅಡ್ವಾಣಿ ಪ್ರಮುಖರು. ನವೆಂಬರ್ 8, 2026ರಂದು 99 ವರ್ಷಗಳನ್ನು ಪೂರೈಸಿ, ಜೀವನದ ನೂರನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಅವರ ಬದುಕು ಭಾರತದ ರಾಜ–ಕೀಯ ಬದಲಾವಣೆಗಳ ಹಲವು ಅಧ್ಯಾಯಗಳಿಗೆ ಸಾಕ್ಷಿಯಾಗಿದೆ.

1927ರ ನವೆಂಬರ್ 8ರಂದು ಅವಿಭಜಿತ ಭಾರತದ ಕರಾಚಿಂ–ಯಲ್ಲಿ ಜನಿಸಿದ ಅಡ್ವಾಣಿಯವರ ಬಾಲ್ಯ ಸುಖಕರವಾಗಿದ್ದರೂ, ದೇಶ ವಿಭಜನೆಯ ಕಹಿ ಅನುಭವ ಅವರ ಬದುಕಿನ ದಿಕ್ಕನ್ನೇ ಬದಲಿಸಿತು. ಹುಟ್ಟಿದ ನೆಲವನ್ನು ತೊರೆದು ಹೊಸ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಎದುರಾಯಿತು. ಆದರೆ ಸಂಕಷ್ಟಗಳಿಗೆ ಕುಗ್ಗದೆ ಸಾರ್ವಜನಿಕ ಜೀವನದತ್ತ ಹೆಜ್ಜೆ ಹಾಕಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲಕ ಸಾರ್ವಜನಿಕ ಬದುಕು ಆರಂಭಿಸಿದ ಅವರು, ರಾಜಸ್ಥಾನದಲ್ಲಿ ಪ್ರಚಾರಕರಾಗಿ ಕಾರ್ಯನಿರ್ವಹಿಸಿದರು. ನಂತರ ಭಾರತೀಯ ಜನಸಂಘದ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಅಟಲ್ ಬಿಹಾರಿ ವಾಜಪೇಯಿಯವರೊಂದಿಗೆ ಬೆಳೆದ ಅವರ ರಾಜಕೀಯ ಒಡನಾಟ ಭಾರತೀಯ ಜನತಾ ಪಕ್ಷದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿತು. ಒಬ್ಬರು ಜನಮನ ಸೆಳೆಯುವ ವಾಗ್ಮಿಯಾದರೆ, ಮತ್ತೊಬ್ಬರು ಸಂಘಟನೆಗೆ ಒತ್ತು ನೀಡಿದ ನಾಯಕ. ಇವರಿಬ್ಬರ ಸಹಕಾರ ಬಿಜೆಪಿಯ ರಾಜಕೀಯ ವಿಸ್ತರಣೆಗೆ ನೆರವಾಯಿತು.

1975ರಲ್ಲಿ ದೇಶದಲ್ಲಿ ಜಾರಿಯಾದ ತುರ್ತು ಪರಿಸ್ಥಿತಿ ಅಡ್ವಾಣಿಯವರ ರಾಜಕೀಯ ಬದುಕಿನ ಪ್ರಮುಖ ಘಟ್ಟ. ಆ ಸಂದರ್ಭದಲ್ಲಿ ಬಂಧನಕ್ಕೊಳಗಾದ ಅವರು, ತಮ್ಮ ಅನುಭವಗಳನ್ನು 'ಎ ಪ್ರಿಸನರ್ಸ್ ಸ್ಕ್ರಾಪ್–ಬುಕ್' ಕೃತಿಯಲ್ಲಿ ದಾಖಲಿಸಿದರು. ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಂವಿಧಾನದ ಮೌಲ್ಯಗಳ ಕುರಿತು ನಡೆದ ಚರ್ಚೆಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡರು.

1980ರಲ್ಲಿ ಬಿಜೆಪಿ ಸ್ಥಾಪನೆಯಾದ ನಂತರ ಪಕ್ಷವನ್ನು ಸಂಘಟಿಸುವಲ್ಲಿ ಅಡ್ವಾಣಿಯವರು ಪ್ರಮುಖ ಪಾತ್ರ ವಹಿಸಿದರು. 1984ರ ಲೋಕಸಭಾ ಚುನಾವಣೆಯಲ್ಲಿ ಕೇವಲ ಎರಡು ಸ್ಥಾನಗಳನ್ನು ಪಡೆದಿದ್ದ ಬಿಜೆಪಿ, 1989ರಲ್ಲಿ 85 ಸ್ಥಾನಗಳಿಗೆ ಏರಿತು. 1996ರಲ್ಲಿ ಲೋಕಸಭೆಯ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಈ ಬೆಳವಣಿಗೆಯ ಹಿಂದೆ ಅಡ್ವಾಣಿಯವರ ಸಂಘಟನಾ ಪ್ರಯತ್ನಗಳೂ ಪ್ರಮುಖವಾಗಿದ್ದವು.

1990ರಲ್ಲಿ ಸೋಮನಾಥದಿಂದ ಅಯೋಧ್ಯೆಯವರೆಗೆ ಅವರು ಕೈಗೊಂಡ ರಾಮಜನ್ಮಭೂಮಿ ರಥಯಾತ್ರೆ ಭಾರತದ ರಾಜಕೀಯ ಇತಿಹಾಸದಲ್ಲಿ ಮಹತ್ವದ ತಿರುವಾಯಿತು. ಈ ಯಾತ್ರೆ ಬಿಜೆಪಿಯ ಜನಬೆಂಬಲ ವಿಸ್ತರಣೆಗೆ ಕಾರಣವಾದರೆ, ಮತ್ತೊಂದೆಡೆ ಧಾರ್ಮಿಕ ಧ್ರುವೀಕರಣ ಮತ್ತು ಸಾಮಾಜಿಕ ಸಾಮರಸ್ಯದ ಕುರಿತು ತೀವ್ರ ಚರ್ಚೆಗಳಿಗೂ ಕಾರಣವಾಯಿತು. ಹೀಗಾಗಿ ಅಡ್ವಾಣಿಯವರ ರಾಜ–ಕೀಯ ಪಯಣವನ್ನು ಅರ್ಥಮಾಡಿಕೊಳ್ಳುವಾಗ ಅದರ ಸಾಧನೆಗಳ ಜೊತೆಗೆ ವಿವಾದಗಳನ್ನೂ ಗಮನಿಸಬೇಕಾಗುತ್ತದೆ.

ಜನತಾ ಸರ್ಕಾರದಲ್ಲಿ ವಾರ್ತಾ ಮತ್ತು ಪ್ರಸಾರ ಸಚಿವರಾಗಿ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಗೃಹಸಚಿವರಾಗಿ ಹಾಗೂ ಉಪಪ್ರಧಾನಿಯಾಗಿ ಅವರು ಸೇವೆ ಸಲ್ಲಿಸಿದರು. ದೇಶದ ಆಂತರಿಕ ಭದ್ರತೆ ಮತ್ತು ಭಯೋತ್ಪಾದನೆ ನಿಗ್ರಹಕ್ಕೆ ಸಂಬಂಧಿಸಿದ ನೀತಿಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಆ ಅವಧಿಯ ಕೆಲವು ಕಠಿಣ ಕಾನೂನುಗಳು ನಾಗರಿಕ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ದೃಷ್ಟಿಯಿಂದ ಟೀಕೆಗಳಿಗೂ ಒಳಗಾಗಿದ್ದವು.

ರಾಜಕೀಯದಾಚೆಗೂ ಅಡ್ವಾಣಿಯವರಿಗೆ ಓದು, ಬರವಣಿಗೆ, ಚಲನಚಿತ್ರ, ಇತಿಹಾಸ ಮತ್ತು ಸಿಂಧಿ ಸಂಸ್ಕೃತಿಯ ಬಗ್ಗೆ ವಿಶೇಷ ಆಸಕ್ತಿಯಿತ್ತು. ಅವರ 'ಮೈ ಕಂಟ್ರಿ ಮೈ ಲೈಫ್' ಕೃತಿಯು ಅವರ ವೈಯಕ್ತಿಕ ಅನುಭವಗಳೊಂದಿಗೆ ದೇಶದ ರಾಜಕೀಯ ಬೆಳವಣಿಗೆಗಳನ್ನೂ ದಾಖಲಿಸುತ್ತದೆ.

2024ರಲ್ಲಿ ದೇಶದ ಅತ್ಯುನ್ನತ ನಾಗರಿಕ ಗೌರವವಾದ ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ಅಡ್ವಾಣಿಯವರ ರಾಜಕೀಯ ಬದುಕು ಸಾಧನೆ, ಸಂಘರ್ಷ, ವಿವಾದ ಮತ್ತು ಬದಲಾವಣೆಗಳ ಸುದೀರ್ಘ ಪಯಣವಾಗಿದೆ.

ರಾಜಕೀಯದಲ್ಲಿ ಅಧಿಕಾರದ ಅವಧಿಗಿಂತ ವ್ಯಕ್ತಿಯ ಆಲೋಚನೆಗಳು, ನಿರ್ಧಾರಗಳು ಮತ್ತು ಕಾರ್ಯಗಳು ಸಮಾಜದ ಮೇಲೆ ಬೀರುವ ಪರಿಣಾಮವೇ ಇತಿಹಾಸದಲ್ಲಿ ಹೆಚ್ಚು ಕಾಲ ಉಳಿಯುತ್ತದೆ. ಅಡ್ವಾಣಿಯವರ ಬದುಕು ಈ ಸತ್ಯವನ್ನು ನೆನಪಿಸುತ್ತದೆ.



ದರ ಏರಿಕೆ ಖಂಡನೀಯ : ಮಲ್ಲಿನಾಥ ಪಾಟೀಲ

ಕಾಳಗಿ : ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಸಾಮಾನ್ಯರ ಬದುಕು ನೆಮ್ಮದಿಯಿಂದ ಸಾಗುತ್ತಿಲ್ಲ. ನಂದಿನಿ ಹಾಲಿನ ದರವನ್ನು ಲೀಟರ್‌ಗೆ 8 ಏರಿಕೆ ಹಾಗೂ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಶೇ 23ರಷ್ಟು ಮತ್ತು ಬಿಎಂಟಿಸಿ ಪ್ರಯಾಣ ದರ ಶೇ 35ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ನಡೆ ಖಂಡನೀಯವಾಗಿದೆ ಅವೈಜ್ಞಾನಿಕವಾದ ದರ ಏರಿಕೆಯನ್ನು ಕೂಡಲೇ ಹಿಂಪಡೆಯಬೇಕು ಹಿಂದೆ ಯಾವುದೇ ಸರ್ಕಾರದ ಅವಧಿಯಲ್ಲೂ ಇಷ್ಟು ದೊಡ್ಡ ಮೊತ್ತವನ್ನು ಹೆಚ್ಚಿಸಿರಲಿಲ್ಲ. ತಕ್ಷಣವೇ ಹಾಲಿನ ದರವನ್ನು ಇಳಿಕೆ ಮಾಡಬೇಕು ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾ ಕೋಶಾಧ್ಯಕ್ಷ ಮಲ್ಲಿನಾಥ ಪಾಟೀಲ ಕಾಳಗಿ ಹೇಳಿದರು.

ಪತ್ರಿಕಾ ಹೇಳಿಕೆ ನೀಡಿದ ಅವರು ರೈತರಿಗೆ ನ್ಯಾಯಯುತ ಬೆಲೆ ನೀಡುವುದು ಸರ್ಕಾರದ ಕರ್ತವ್ಯವೇ ಹೊರತು, ಅದರ ಸಂಪೂರ್ಣ ಹೊರೆಯನ್ನು ಸಾಮಾನ್ಯ ಗ್ರಾಹಕರ ಮೇಲೆ ಹೇರುವುದು ಯಾವ ನ್ಯಾಯ. ರೈತರಿಗೆ ನೇರವಾಗಿ ಸೂಕ್ತ ಆರ್ಥಿಕ ನೆರವು ನೀಡುವ ಬದಲು ಹಾಲಿನ ದರ ಹೆಚ್ಚಿಸಿ ಬಡ ಕುಟುಂಬಗಳ ಮಕ್ಕಳಿಗೆ ಸಿಗಬೇಕಾದ ಪೌಷ್ಟಿಕ ಆಹಾರವನ್ನೇ ದುಬಾರಿಗೊಳಿಸಿರುವುದು ಖಂಡನೀಯ. ರೈತರಿಗೂ ನ್ಯಾಯ ಸಿಗಬೇಕು, ಗ್ರಾಹಕರಿಗೂ ಕೈಗೆಟುಕುವ ದರದಲ್ಲಿ ಹಾಲು ದೊರೆಯಬೇಕು. ಇದಕ್ಕಾಗಿ ಸರ್ಕಾರ ತನ್ನ ಆರ್ಥಿಕ ನೀತಿಯಲ್ಲಿ ಸಮತೋಲನ ಕಾಯ್ದುಕೊಳ್ಳಬೇಕು' ಎಂದು ಆಗ್ರಹಿಸಿದರು.



ದಲಿತ ಮಹಿಳೆ ಮೇಲೆ ಹಲ್ಲೆ ಭೀಮ ಆರ್ಮಿ ಖಂಡನೆ

ಜೇವರ್ಗಿ: ಪಟ್ಟಣದ ಲಕ್ಕಪ್ಪ ಲೇ ಔಟ ನಲ್ಲಿ ದಲಿತ ಮಹಿಳೆ ಬಸವಂತಮ್ಮ ಗಂಡ ದೊಡ್ಡಪ್ಪ ಮಲ್ಲಾ ಕೆ ಎಂಬ ಮಹಿಳೆ ಮೇಲೆ ಪವರ್ಣಯರಾದ ಮುತ್ತಪ್ಪ ಅವರ ಪತ್ನಿ ದೇವಮ್ಮ ಮತ್ತು ನಾಗಮ್ಮ ಎಂಬುವರು ಮರಣಾಂತಿಕ ಹಲ್ಲೆ ಮಾಡಿ ಜಾಂತಿನಿಂದನೆ ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಭೀಮಾರ್ಮಿ ತಾಲೂಕ ಅಧ್ಯಕ್ಷ ಯಮುನೇಶ್ ಅಂಕಲಿಗಿ ಖಂಡಿಸಿ ಮಾತನಾಡಿದ ಅವರು ಒಂದು ವಾರದೊಳಗೆ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಇಲ್ಲವಾದರೆ ಉಗ್ರವಾದ ಹೋರಾಟ ಮಾಡಲಾಗುತ್ತದೆ ಎಂದು ಹೇಳಿದರು ಈ ಸಂದರ್ಭದಲ್ಲಿ ಗಿರಿ ಮಲ್ಲಪ್ಪ ಯಲಗೋಡ ವಕೀಲರು ಹಾಗೂ ವಿಶ್ವರಾಧ್ಯ ಗೋಪಾಲಕರು ಸಿದ್ದು ಮುಧ್ವಾಳ ಅಬ್ದುಲ್ ಗಣಿ ಭೀಮ್ ಆರ್ಮಿ ನಗರ ಅಧ್ಯಕ್ಷ ಬಸವರಾಜ್ ಇಂಗಳಗಿ ಸೇರಿದಂತೆ ಅನೇಕರಿದ್ದರು

ಪ್ರಾಮಾಣಿಕ ಸೇವೆ ಸಲ್ಲಿಸಿದರೆ ಪ್ರಶಸ್ತಿಗಳು ಹುಡುಕಿಕೊಂಡು ಬರುತ್ತವೆ : ಕಟ್ಟಿ ಸಾಕ್ಷಿ

ಕಲಬುರಗಿ ; ಸಮಾಜದಲ್ಲಿ ಎಲೆ ಮರೆಕಾಯಿ ಹಾಗೆ ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಮಾಡುವವರಿಗೆ ಅವರ ಸೇವೆ ಗುರುತಿಸಿ ಅವರ ಮನೆ ಬಾಗಿಲಿಗೆ ಪ್ರಶಸ್ತಿ, ಸನ್ಮಾನಗಳು ಹುಡುಕಿಕೊಂಡು ಬರುತ್ತವೆ ಎಂಬುವುದಕ್ಕೆ ಜಿಲ್ಲೆಯ ಹೆಸರಾಂತ ವೈದ್ಯರು ಹಾಗೂ ಬಡವರ ಪಾಲಿನ ದೇವರ ಸಮನಾದ ಡಾ. ಹೆಚ್.ಎಸ್.ಕಟ್ಟಿ ಅವರ ಸುಪುತ್ರಿ ಹಾಗೂ ಜೇವರ್ಗಿ ತಾಲ್ಲೂಕಿನ ಮಂದೇವಾಲ ಪ್ರಾಥಮಿಕ ಆರೋಗ್ಯ ಕೇಂದ್ರ ಆಡಳಿತಾಧಿಕಾರಿ ಡಾ. ರೇಣುಕಾ ಕಟ್ಟಿ ಅವರೇ ಸಾಕ್ಷಿ.ನನಗರದ ಕನ್ನಡ ಭವನದಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ವತಿಯಿಂದ ಏರ್ಪಡಿಸಿದ ಸಿರಿ ನುಡಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾಧಕರಿಗೆ "ಜಿಲ್ಲಾ ಕರ್ನಾಟಕ ರಾಜ್ಯೋತ್ಸವ" ಪ್ರಶಸ್ತಿ ಸಮಾರಂಭದಲ್ಲಿ ಡಾ. ರೇಣುಕಾ ಕಟ್ಟಿ ಅವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ. ನಮೋಶಿ, ಶ್ರೀಶೈಲ ದೇಶಿಕೇಂದ್ರ ಡಾ. ಸಾರಂಗಧರ ಮಹಾಸ್ವಾಮಿಗಳು, ಸೊನ್ನ ದಾಸೋಹ ಮಠದ ಡಾ. ಶಿವಾನಂದ ಮಹಾಸ್ವಾಮಿಗಳು, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ವಿಜಯಕುಮಾರ್ ತೇಗಲತಿಪ್ಪಿ ಸೇರಿದಂತೆ ಅನೇಕ ಗಣ್ಯಾಮಾನ್ಯರು ಉಪಸ್ಥಿತರಿದ್ದರು. ಡಾ. ಅರವಿಂದ ಕಟ್ಟಿ, ಜೈಭೀಮ ಕಟ್ಟಿ, ಡಾ. ಶರಣು ಕಟ್ಟಿ, ಮಹಾದೇವಿ ಕಡಗಂಚಿ, ಡಾ.ಶೃತಿ ಸೇರಿದಂತೆ ಅನೇಕರು ಪ್ರಶಸ್ತಿ ಲಭಿಸಿದಕ್ಕೆ ಅಭಿನಂದನೆಗಳು ಸಲ್ಲಿಸಿ ಮುಂದಿನ ದಿನಗಳಲ್ಲಿ ಅವರ ಸೇವೆಗೆ ಹೆಚ್ಚಿನ ಪ್ರಶಸ್ತಿಗಳನ್ನು ದೊರಕಲೆಂದು ಮನದುಂಬಿ ಶುಭ ಹಾರೈಸಿದರು.

ಟ್ರಂಪ್‌ಗೆ 'ಬ್ಲೂ ಟಿಕ್' ಬದಲು 'ಬ್ಲೂ ಸುನಾಮಿ'!

■ ಉದಯರಶ್ಮಿ ದಿನಪತ್ರಿಕೆ

ಅಮೆರಿಕದ ಕಾಂಗ್ರೆಸ್‌ನ ಎರಡೂ ಸದನಗಳ ಮೇಲೆ ಡೆಮಾಕ್ರಟ್‌ಗಳ ಹಿಡಿತ; ಸುಂಕದ ನೀತಿ, ಬೆಲೆ ಏರಿಕೆ ಮತ್ತು ಇರಾನ್ ಯುದ್ಧದ ಬಗ್ಗೆ ಜನರ ಅಸಮಾಧಾನ. ಎಐ ಕಂಪನಿಗಳ ಷೇರುಗಳಲ್ಲೂ ಭಾರಿ ಕುಸಿತ!

ರಾಜಕೀಯದಲ್ಲಿ ಅಧಿಕಾರ ಎಷ್ಟೇ



ಪ್ರಬಲವಾಗಿದ್ದರೂ ಜನರ ತೀರ್ಪಿಗಿಂತ ದೊಡ್ಡ ಶಕ್ತಿ ಮತ್ತೊಂದಿಲ್ಲ. ಜಗತ್ತಿನ ರಾಷ್ಟ್ರಗಳಿಗೆ ಸುಂಕದ ಬೆದರಿಕೆ ಹಾಕುತ್ತಾ, ಎದುರಾಳಿಗಳಿಗೆ ಸವಾಲು ಎಸೆಯುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಈಗ ಸ್ವದೇಶದ ಮತದಾರರೇ ಬಿಸಿ ಮುಟ್ಟಿಸಿದ್ದಾರೆ. ನವೆಂಬರ್ 3ರಂದು ನಡೆದ ಮಧ್ಯಂತರ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷ ಕಾಂಗ್ರೆಸ್‌ನ ಎರಡೂ ಸದನಗಳ ನಿಯಂತ್ರಣ ಪಡೆಯುವಲ್ಲಿ ಯಶಸ್ವಿಯಾಗಿದೆ. ಇದು ಟ್ರಂಪ್ ಆಡಳಿತಕ್ಕೆ ಸಣ್ಣ ಹಿನ್ನಡೆಯಲ್ಲ.

2024ರಲ್ಲಿ ಶ್ವೇತಭವನದ ಜೊತೆಗೆ



ಕಾಂಗ್ರೆಸ್‌ನ ಎರಡೂ ಸದನಗಳಲ್ಲೂ ರಿಪಬ್ಲಿಕನ್ ಪಕ್ಷ ಪ್ರಾಬಲ್ಯ ಹೊಂದಿತ್ತು. ಆದರೆ ಕೇವಲ ಎರಡು ವರ್ಷಗಳಲ್ಲಿ ರಾಜಕೀಯ ಚಿತ್ರಣ ಬದಲಾಗಿದೆ. ಜನರು ನೀಡಿದ ಅಧಿಕಾರವನ್ನು ಹೇಗೆ ಬಳಸಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಈಗ ಟ್ರಂಪ್ ಉತ್ತರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಕೆಂಪು ಕೋಟೆಗೆ ಅಪ್ಪಳಿಸಿದ ನೀಲಿ ಸುನಾಮಿ!

ಅಮೆರಿಕದ ಕೆಳಮನೆ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನಲ್ಲಿ 435 ಸ್ಥಾನಗಳಿದ್ದು, ಬಹುಮತಕ್ಕೆ 218 ಸ್ಥಾನಗಳು ಬೇಕು. ಸೆನೆಟ್‌ನಲ್ಲಿ 100 ಸದಸ್ಯರಿದ್ದಾರೆ. ಅಸೋಸಿಯೇಟೆಡ್ ಪ್ರೆಸ್ ಈಗಾಗಲೇ ಎರಡೂ ಸದನಗಳ ನಿಯಂತ್ರಣ ಡೆಮಾಕ್ರಟ್‌ಗಳ ಪಾಲಾಗಿದೆ ಎಂದು ಘೋಷಿಸಿದೆ. ಸೆನೆಟ್‌ನಲ್ಲಿ ಕನಿಷ್ಠ 54 ಸ್ಥಾನಗಳನ್ನು ಖಚಿತಪಡಿಸಿಕೊಂಡಿದ್ದಾರೆ. ಹೌಸ್‌ನಲ್ಲಿ 251ರಿಂದ 268 ಸ್ಥಾನಗಳವರೆಗೆ

ಪಡೆಯುವ ಸಾಧ್ಯತೆಯನ್ನು ಸಿಬಿಎಸ್ ನ್ಯೂಸ್ ಅಂದಾಜಿಸಿದೆ. ಆದರೆ ಕೆಲವು ಕ್ಷೇತ್ರಗಳಲ್ಲಿ ಮತ ಎಣಿಕೆ ಮತ್ತು ಪ್ರಮಾಣೀಕರಣ ಇನ್ನೂ ಬಾಕಿಯಿದೆ. ಹೀಗಾಗಿ ಅಂತಿಮ ಸ್ಥಾನಗಳ ಸಂಖ್ಯೆಯನ್ನು ಈಗಲೇ ನಿಗದಿಪಡಿಸುವುದು ಸರಿಯಲ್ಲ.

ಈ ಚುನಾವಣೆಯ ಗಮನ ಸೆಳೆದ ಬೆಳವಣಿಗೆ ಸೌತ್ ಕ್ಯಾರೊಲಿನಾ. ರಿಪಬ್ಲಿಕನ್ ಪಕ್ಷದ ಭದ್ರಕೋಟೆಯಲ್ಲೇ ಡೆಮಾಕ್ರಟಿಕ್ ಅಭ್ಯರ್ಥಿ, ಮಕ್ಕಳ ವೈದ್ಯೆ ಡಾ. ಅನ್ನಿ ಆಂಡ್ರ್ಯೂಸ್ ಗೆಲುವು ಸಾಧಿಸಿದ್ದಾರೆ. ಲಿಂಡ್ಸೆ ಗ್ರಹಾಂ ನಿಧನದ ನಂತರ ಅವರ ಸಹೋದರಿ ಡಾರ್ಲಿನ್ ಗ್ರಹಾಂ ಅವರನ್ನು ತಾತ್ಕಾಲಿಕವಾಗಿ ಸೆನೆಟ್‌ಗೆ ನೇಮಿಸಲಾಗಿತ್ತು. ಟ್ರಂಪ್ ಅವರ ಬೆಂಬಲವೂ ಡಾರ್ಲಿನ್ ಅವರಿಗೆ ನೆರವಾಗಲಿಲ್ಲ. 1998ರ ನಂತರ ಈ ರಾಜ್ಯದಲ್ಲಿ ಡೆಮಾಕ್ರಟ್ ಸೆನೆಟರ್ ಆಯ್ಕೆಯಾಗಿರಲಿಲ್ಲ ಎಂಬುದು ಈ ಗೆಲುವಿನ ಮಹತ್ವವನ್ನು ತೋರಿಸುತ್ತದೆ.

ಸುಂಕದ ರಾಜಕೀಯಕ್ಕೆ ಜನರ ತಿರುಗೇಟು!

ಟ್ರಂಪ್ ಅವರ ಸುಂಕದ ನೀತಿಯ ಉದ್ದೇಶ ಅಮೆರಿಕದ ಉತ್ಪಾದನೆಯನ್ನು ರಕ್ಷಿಸುವುದು ಮತ್ತು ವಿದೇಶಿ ಆಮದುಗಳ ಅವಲಂಬನೆ ಕಡಿಮೆ ಮಾಡುವುದು. ಆದರೆ ಸುಂಕ ವಿಧಿಸಿದರೆ ಅದರ ಹೊರೆ ವಿದೇಶಿ ಉತ್ಪಾದಕರ ಮೇಲಷ್ಟೇ ಬೀಳುವುದಿಲ್ಲ. ಆಮದುದಾರರಿಂದ ಹಿಡಿದು ಅಂತಿಮ ಗ್ರಾಹಕರವರೆಗೆ ಅದರ ಪರಿಣಾಮ ತಲುಪಬಹುದು. ಬೆಲೆ ಏರಿಕೆ ಮತ್ತು ಜೀವನ ನಿರ್ವಹಣೆಯ ವೆಚ್ಚದಿಂದ ಬಳಲುತ್ತಿರುವ ಅಮೆರಿಕನ್ನರಿಗೆ ಈ ನೀತಿ ಎಷ್ಟು ಅನುಕೂಲ ಮಾಡಿಕೊಟ್ಟಿದೆ ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ.

ಇದರ ಜೊತೆಗೆ ಇರಾನ್ ಯುದ್ಧದ ಪರಿಣಾಮವೂ ರಾಜಕೀಯ ಚರ್ಚೆಯಲ್ಲಿ ಪ್ರಮುಖವಾಗಿದೆ.



ಟ್ರಂಪ್ ಅವರ ಸುಂಕದ ನೀತಿ ಭಾರತ–ಅಮೆರಿಕ ವ್ಯಾಪಾರ ಸಂಬಂಧಗಳ ಮೇಲೂ ಪರಿಣಾಮ ಬೀರಿದೆ. ರಕ್ಷಣಾ ಸಹಕಾರ, ತಂತ್ರಜ್ಞಾನ, ಇಂಧನ ಮತ್ತು ಇಂಡೋ–ಪೆಸಿಫಿಕ್ ಕಾರ್ಯತಂತ್ರಗಳಲ್ಲಿ ಅಮೆರಿಕದ ನಿಲುವು ಭಾರತಕ್ಕೆ ಮುಖ್ಯವಾಗಿದೆ. ಕಾಂಗ್ರೆಸ್‌ನಲ್ಲಿ ಡೆಮಾಕ್ರಟ್‌ಗಳ ಹಿಡಿತ ಹೆಚ್ಚಿರುವುದರಿಂದ ವ್ಯಾಪಾರ ನೀತಿ ಮತ್ತು ವಿದೇಶಾಂಗ ನಿರ್ಧಾರಗಳ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬಹುದು. ಆದರೆ ಅಧ್ಯಕ್ಷರ ಅಧಿಕಾರ ಮುಂದುವರಿಯುವುದರಿಂದ ಟ್ರಂಪ್ ಅವರ ನೀತಿಗಳು ತಕ್ಷಣ ಬದಲಾಗುತ್ತವೆ ಎಂದು ಹೇಳಲಾಗದು.

ಯುದ್ಧದ ವೆಚ್ಚ, ಇಂಧನ ಮಾರುಕಟ್ಟೆಯ ಅನಿಶ್ಚಿತತೆ ಮತ್ತು ಸಾಮಾನ್ಯ ಕುಟುಂಬಗಳ ಮೇಲಿನ ಆರ್ಥಿಕ ಒತ್ತಡ ಆಡಳಿತಕ್ಕೆ ಸವಾಲಾಗಿವೆ. ಟ್ರಂಪ್ ಅವರ ವಿದೇಶಾಂಗ ನೀತಿಯ ಬಗ್ಗೆ ಸ್ವಪಕ್ಷದೊಳಗೂ ಅಸಮಾಧಾನ ವ್ಯಕ್ತವಾಗುತ್ತಿರುವುದು ಗಮನಾರ್ಹ. ಈ ಸೋಲಿಗೆ ಒಂದೇ ಕಾರಣ ಹುಡುಕುವುದಕ್ಕಿಂತ ಆರ್ಥಿಕತೆ, ಯುದ್ಧ ಮತ್ತು ಆಡಳಿತದ ಮೇಲಿನ ಒಟ್ಟಾರೆ ಅಸಮಾಧಾನವನ್ನು ಗಮನಿಸಬೇಕು.

ಷೇರುಪೇಟೆಗೆ ನೀಲಿ ಸುನಾಮಿಯ ಮತ್ತೊಂದು ಹೊಡೆತ!

ಚುನಾವಣೆಯ ನಂತರ ಅಮೆರಿಕದ ಷೇರುಪೇಟೆಯಲ್ಲೂ ಆತಂಕದ ವಾತಾವರಣ ನಿರ್ಮಾಣವಾಯಿತು. ನವೆಂಬರ್ 5ರಂದು ನಾಸ್ಡಾಕ್ ಸೂಚ್ಯಂಕ ಶೇ.5.5ರಷ್ಟು ಕುಸಿಯಿತು. ಎಐ ಕ್ಷೇತ್ರಕ್ಕೆ ಸಂಬಂಧಿಸಿದ ಕಂಪನಿಗಳ ಷೇರುಗಳಲ್ಲಿ ಭಾರಿ ಮಾರಾಟ ನಡೆಯಿತು. ನಾಸ್ಡಾಕ್‌ನ ಮಾರುಕಟ್ಟೆ ಮೌಲ್ಯದಿಂದ ಸುಮಾರು 2.5 ಟ್ರಿಲಿಯನ್ ಡಾಲರ್ ಅಳಿದಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಎಐ ಕಂಪನಿಗಳ ಮೇಲೆ ಡೆಮಾಕ್ರಟ್‌ಗಳು ಹೆಚ್ಚಿನ ನಿಯಂತ್ರಣ ಹೇರಬಹುದು, ಡೇಟಾ ಸೆಂಟರ್‌ಗಳ ನಿರ್ಮಾಣಕ್ಕೆ ಅನುಮತಿ ಪಡೆಯುವುದು ಕಷ್ಟವಾಗಬಹುದು, ವಿದ್ಯುತ್ ಮತ್ತು ನೀರಿನ ಬಳಕೆಯ ಬಗ್ಗೆ ಹೊಸ ನಿರ್ಬಂಧಗಳು ಬರಬಹುದು ಎಂಬ ಆತಂಕ ಹೂಡಿಕೆದಾರರಲ್ಲಿ ಮೂಡಿದೆ. ಆದರೆ ಈ ಕುಸಿತಕ್ಕೆ ಚುನಾವಣೆಯೊಂದೇ ಕಾರಣವಲ್ಲ. ಎಐ ಕ್ಷೇತ್ರದಲ್ಲಿ ಭಾರಿ ಹೂಡಿಕೆ ಮಾಡುತ್ತಿರುವ ಕಂಪನಿಗಳಿಗೆ ನಿರೀಕ್ಷಿತ ಲಾಭ ಸಿಗುತ್ತದೆಯೇ ಎಂಬ ಪ್ರಶ್ನೆಯೂ ಮಾರುಕಟ್ಟೆಯನ್ನು ಕಾಡುತ್ತಿದೆ.

ನವೆಂಬರ್ 6ರಂದು ನಾಸ್ಡಾಕ್ ಶೇ.1.1ರಷ್ಟು ಚೇತರಿಸಿಕೊಂಡಿತು. ಎಸ್‌ಅಂಡ್‌ಪಿ 500 ಕೂಡ ಶೇ.0.3ರಷ್ಟು ಏರಿಕೆ ಕಂಡರೆ ಡೌ ಜೋನ್ಸ್ ಶೇ.0.5ರಷ್ಟು ಕುಸಿಯಿತು. ಆದರೂ ವಾರದ ಲೆಕ್ಕದಲ್ಲಿ ನಾಸ್ಡಾಕ್ ಶೇ.3.4ರಷ್ಟು ಇಳಿಕೆಯಾಗಿದೆ. ಅಂದರೆ ಒಂದು ದಿನದ ಚೇತರಿಕೆ ಕಂಡರೂ ಹೂಡಿಕೆದಾರರ ಆತಂಕ ಸಂಪೂರ್ಣ ದೂರವಾಗಿಲ್ಲ.

ಟ್ರಂಪ್‌ಗೆ ಈಗ ಕಾಂಗ್ರೆಸ್‌ನಿಂದ ಪ್ರಶ್ನೆಗಳ ಸುರಿಮಳೆ!

ಹೊಸ ಕಾಂಗ್ರೆಸ್ 2027ರ ಜನವರಿ 3ರಂದು ಅಧಿಕಾರ ವಹಿಸಿಕೊಳ್ಳಲಿದೆ. ಅಲ್ಲಿಯವರೆಗೆ ಟ್ರಂಪ್ ಅಧ್ಯಕ್ಷರಾಗಿ ಮುಂದುವರಿಯುತ್ತಾರೆ. ಆದರೆ ನಂತರ



ಆಡಳಿತದ ನಿರ್ಧಾರಗಳ ಬಗ್ಗೆ ತನಿಖೆ ನಡೆಸಲು, ದಾಖಲೆಗಳನ್ನು ಕೇಳಲು ಮತ್ತು ಸಾರ್ವಜನಿಕ ವಿಚಾರಣೆಗಳನ್ನು ನಡೆಸಲು ಡೆಮಾಕ್ರಟ್‌ಗಳಿಗೆ ಹೆಚ್ಚಿನ ಅವಕಾಶ ಸಿಗಲಿದೆ.

ಬಜೆಟ್, ತೆರಿಗೆ, ವಲಸೆ ನೀತಿ ಮತ್ತು ವಿದೇಶಾಂಗ ನೀತಿಗಳಲ್ಲಿ ಟ್ರಂಪ್‌ಗೆ ವಿರೋಧ ಪಕ್ಷದ ಸವಾಲು ಎದುರಾಗಲಿದೆ. ಅಧ್ಯಕ್ಷರಿಗೆ ವೀಟೋ ಅಧಿಕಾರವಿದ್ದರೂ, ಕಾಂಗ್ರೆಸ್‌ನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬೆಂಬಲ ದೊರೆತರೆ ವೀಟೋವನ್ನು ಮೀರಿ ಮಸೂದೆ ಅಂಗೀಕರಿಸಬಹುದು.

ಚುನಾವಣೆಯಲ್ಲಿ ಸೋತ ಮಾತ್ರಕ್ಕೆ ಟ್ರಂಪ್ ಅಧಿಕಾರ ಕಳೆದುಕೊಳ್ಳುವುದಿಲ್ಲ. ಅಧ್ಯಕ್ಷರನ್ನು ಪದಚ್ಯುತಿಗೊಳಿಸಲು ಪ್ರತ್ಯೇಕ ಇಂಪೀಚ್‌ಮೆಂಟ್ ಪ್ರಕ್ರಿಯೆ ಅಗತ್ಯ. ಹೌಸ್‌ನಲ್ಲಿ ಆರೋಪ ಅಂಗೀಕಾರವಾದ ನಂತರ ಸೆನೆಟ್‌ನಲ್ಲಿ ಹಾಜರಿರುವ ಸದಸ್ಯರ ಮೂರನೇ



ಆಕಾಶ ರೋಡಗಿ.
ಶಿವೂರ – ಅಫಜಲಪುರ
ಕಲಬುರ್ಗಿ ಜಿಲ್ಲೆ

ಎರಡರಷ್ಟು ಬೆಂಬಲವೂ ಬೇಕು. ಆದ್ದರಿಂದ ಈಗಿನ ರಾಜಕೀಯ ಬದಲಾವಣೆ ಟ್ರಂಪ್ ಆಡಳಿತಕ್ಕೆ ಸವಾಲು, ಆದರೆ ತಕ್ಷಣದ ಅಧಿಕಾರ ಬದಲಾವಣೆಯಲ್ಲ.

ಭಾರತದ ಪಾಲಿಗೆ ಏನು ಸಂದೇಶ?

ಟ್ರಂಪ್ ಅವರ ಸುಂಕದ ನೀತಿ ಭಾರತ–ಅಮೆರಿಕ ವ್ಯಾಪಾರ ಸಂಬಂಧಗಳ ಮೇಲೂ ಪರಿಣಾಮ ಬೀರಿದೆ. ರಕ್ಷಣಾ ಸಹಕಾರ, ತಂತ್ರಜ್ಞಾನ, ಇಂಧನ ಮತ್ತು ಇಂಡೋ–ಪೆಸಿಫಿಕ್ ಕಾರ್ಯತಂತ್ರಗಳಲ್ಲಿ ಅಮೆರಿಕದ ನಿಲುವು ಭಾರತಕ್ಕೆ ಮುಖ್ಯವಾಗಿದೆ. ಕಾಂಗ್ರೆಸ್‌ನಲ್ಲಿ ಡೆಮಾಕ್ರಟ್‌ಗಳ ಹಿಡಿತ ಹೆಚ್ಚಿರುವುದರಿಂದ ವ್ಯಾಪಾರ ನೀತಿ ಮತ್ತು ವಿದೇಶಾಂಗ ನಿರ್ಧಾರಗಳ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬಹುದು. ಆದರೆ ಅಧ್ಯಕ್ಷರ ಅಧಿಕಾರ ಮುಂದುವರಿಯುವುದರಿಂದ ಟ್ರಂಪ್ ಅವರ ನೀತಿಗಳು ತಕ್ಷಣ ಬದಲಾಗುತ್ತವೆ ಎಂದು ಹೇಳಲಾಗದು.

ಕೊನೆಯ ಮಾತು

ಎಲಾನ್ ಮಸ್ಕ್ ಅವರಂತಹ ಪ್ರಭಾವಿ ಉದ್ಯಮಿಗಳ ಬೆಂಬಲ, ಹಣಬಲ ಮತ್ತು ಸಾಮಾಜಿಕ ಜಾಲತಾಣಗಳ ಪ್ರಚಾರದಿಂದ ರಾಜಕೀಯ ವಾತಾವರಣವನ್ನು ರೂಪಿಸಬಹುದು. ಆದರೆ ಜನರ ಬದುಕಿನ ಸಮಸ್ಯೆಗಳಿಗೆ ಉತ್ತರ ನೀಡದಿದ್ದರೆ ಆ ಪ್ರಭಾವ ಹೆಚ್ಚು ಕಾಲ ಉಳಿಯುವುದಿಲ್ಲ.

2024ರಲ್ಲಿ ಟ್ರಂಪ್ ಅವರನ್ನು ಅಧಿಕಾರಕ್ಕೆ ಮರಳಿಸಿದ ಮತದಾರರೇ 2026ರಲ್ಲಿ ಅವರ ಪಕ್ಷಕ್ಕೆ ಎಚ್ಚರಿಕೆ ನೀಡಿದ್ದಾರೆ. ಜಗತ್ತಿಗೆ ಸುಂಕದ ಸುನಾಮಿ ಕಳುಹಿಸಿದ ಅಧ್ಯಕ್ಷನಿಗೆ ಸ್ವದೇಶದಲ್ಲೇ ನೀಲಿ ಸುನಾಮಿ ಎದುರಾಗಿದೆ. ರಾಜಕೀಯದಲ್ಲಿ ಪ್ರಚಾರದಿಂದ ಜನರನ್ನು ಸೆಳೆಯಬಹುದು; ಆದರೆ ಅವರ ವಿಶ್ವಾಸವನ್ನು ಉಳಿಸಿಕೊಳ್ಳುವುದು ಆಡಳಿತದಿಂದ ಮಾತ್ರ ಸಾಧ್ಯ. ಕೊನೆಗೆ ಮತಪೆಟ್ಟಿಗೆಯೇ ನಾಯಕನ ನಿಜವಾದ ಶಕ್ತಿಯನ್ನು ಅಳೆಯುತ್ತದೆ.

ನಿಂಬರ್ಗಾ ಮತ್ತು ಆಳಂದ ನಗರದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವಂತೆ ಕಮಲಾಬಾಯಿ ಕುಡಕಿ ಮನವಿ

ಕಲಬುರಗಿ ; ಕಲ್ಯಾಣ ಕರ್ನಾಟಕದ ಕಲಬುರಗಿ ಜಿಲ್ಲೆಯ ಆಳಂದ ತಾಲೂಕು ಹಾಗೂ ನಿಂಬರ್ಗಾ ಭಾಗವು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಾಗಿವೆ. ನಂಜುಂಡಪ್ಪ ವರದಿಯ ಶಿಫಾರಸುಗಳ ಹಿನ್ನೆಲೆಯಲ್ಲಿ ಈ ಭಾಗಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡಬೇಕಾಗಿದೆ.

ಈ ಭಾಗದ ಗ್ರಾಮೀಣ ಪ್ರದೇಶಗಳಲ್ಲಿನ ಬಡ, ಮಧ್ಯಮ ಹಾಗೂ ಹಿಂದುಳಿದ ವರ್ಗಗಳ ಕುಟುಂಬಗಳ ಹೆಣ್ಣುಮಕ್ಕಳು ಪದವಿಪೂರ್ವ ಶಿಕ್ಷಣ ಮುಗಿಸಿದ ನಂತರ ಉನ್ನತ ಶಿಕ್ಷಣ ಪಡೆಯಲು ಕಲಬುರಗಿ ಅಥವಾ ಇತರೆ ದೂರದ ನಗರಗಳಿಗೆ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಇದರಿಂದ ಆರ್ಥಿಕ ಸಂಕಷ್ಟ, ಸಾರಿಗೆ ಸಮಸ್ಯೆ, ವಸತಿ ಸೌಲಭ್ಯದ ಕೊರತೆ ಹಾಗೂ ಸುರಕ್ಷತೆಯ ಆತಂಕಗಳಿಂದಾಗಿ ಅನೇಕ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.



ವಿಶೇಷವಾಗಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಆರ್ಥಿಕವಾಗಿ ದುರ್ಬಲ ಕುಟುಂಬಗಳ ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಸೂಕ್ತ ಅವಕಾಶಗಳು ದೊರೆಯಬೇಕಾಗಿದೆ. ಮಹಿಳೆಯರ ಶಿಕ್ಷಣಕ್ಕೆ ಉತ್ತೇಜನ ನೀಡುವುದರಿಂದ ಮಹಿಳಾ ಸಬಲೀಕರಣ, ಸ್ವಾವಲಂಬನೆ ಹಾಗೂ ಸಾಮಾಜಿಕ ಪರಿವರ್ತನೆ ಸಾಧ್ಯವಾಗುತ್ತದೆ.

ಹೆಣ್ಣುಮಕ್ಕಳ ಶಿಕ್ಷಣವು ಕೇವಲ ಒಂದು ಕುಟುಂಬದ ಅಭಿವೃದ್ಧಿಯಲ್ಲ, ಅದು ಇಡೀ ಸಮಾಜದ ಅಭಿವೃದ್ಧಿಯಾಗಿದೆ. ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಅವರ ಮನೆ ಸಮೀಪದಲ್ಲಿಯೇ ಉನ್ನತ ಶಿಕ್ಷಣ ದೊರೆಯುವಂತೆ ಮಾಡುವುದು ಸರ್ಕಾರದ ಸಾಮಾಜಿಕ ಜವಾಬ್ದಾರಿಯಾಗಿದೆ. ಆದ್ದರಿಂದ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ನಿಂಬರ್ಗಾ ಮತ್ತು ಆಳಂದ ನಗರದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿ ಈ ಭಾಗದ ಸಾವಿರಾರು ವಿದ್ಯಾರ್ಥಿನಿಯರ ಉನ್ನತ ಶಿಕ್ಷಣದ ಕನಸನ್ನು ನನಸಾಗಿಸ ಬೇಕೆಂದು ತಮ್ಮಲ್ಲಿ ಹೃತ್ಪೂರ್ವಕವಾಗಿ ಒತ್ತಾಯಿಸುತ್ತೇನೆ.

ಭಾರತದಲ್ಲಿ ವಾರ್ಷಿಕ ಸುಮಾರು 9 ಲಕ್ಷ ಜನರ ಕ್ಯಾನ್ಸರ್ ಸಾವು

ಕಲಬುರಗಿ : ವಿಶ್ವ ಆರೋಗ್ಯ ಸಂಸ್ಥೆ ಮತ್ತು ಐಎಆರ್‌ಸಿ ಸಂಸ್ಥೆಯ ವರದಿಯ ಪ್ರಕಾರ ಭಾರತದಲ್ಲಿ ವಾರ್ಷಿಕವಾಗಿ ಸುಮಾರು 9 ಲಕ್ಷ ಜನರು ಕ್ಯಾನ್ಸರ್ ಕಾಯಿಲೆಯಿಂದ ಸಾವನಪ್ಪುತ್ತಿದ್ದಾರೆ ಎಂಬ ವರದಿ ಶೂಚನೀಯವಾಗಿದೆ. ಆದ್ದರಿಂದ ಆರೋಗ್ಯಕರ ಜೀವನ ಶೈಲಿಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ಕ್ಯಾನ್ಸರ್ ರೋಗ ಬರದಂತೆ

ಮುಂಜಾಗ್ರತೆ ವಹಿಸುವುದು ಅಗತ್ಯವಾಗಿದೆ ಎಂದು ವೈದ್ಯಾಧಿಕಾರಿ ಡಾ.ಅನುಪಮಾ

ಎಸ್.ಹೇಳಿದರು. ನಗರದ ಶೇಖ ರೋಜಾ ದಲ್ಲಿರುವ ಶಹಾಬಜಾರ ಯುಪಿಎಸಿಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಜಾಗತಿಕವಾಗಿ ದಿನಕ್ಕೆ 54,794 ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿದ್ದು, ಅದರಲ್ಲಿ ದಿನಕ್ಕೆ 26,575, ವರ್ಷಕ್ಕೆ 97 ಲಕ್ಷ ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ. ಕಾಯಿಲೆಯು ವಯಸ್ಸು, ಲಿಂಗ, ಅನುವಂಶೀಯತೆ, ಪರಿಸರದ ಅಂಶಗಳು, ರಾಸಾಯನಿಕ ವಸ್ತುಗಳ ಸೇವನೆ, ತಂಬಾಕು, ಆಲ್ಕೋಹಾಲ್, ವಿಷಪೂರಿತ ಆಹಾರದ ಸೇವನೆ,



ಎಚ್.ಸಿ.ಬಿ, ಎಚ್.ಬಿ.ವಿ, ಇ.ಬಿ.ವಿ ಬ್ಯಾಕ್ಟೀರಿಯಾ, ಕೆಲವು ಔಷಧಗಳ ನಿರಂತರ ಸೇವನೆಯಂತಹ ಮುಂತಾದ ಕಾರಣಗಳಿಂದ ಕ್ಯಾನ್ಸರ್ ರೋಗ ಬರುತ್ತದೆ. ತಂಬಾಕು, ಮದ್ಯಪಾನ,ರಾಸಾಯನಿಕಯುಕ್ತ ಆಹಾರ ಸೇವನೆ ಮಾಡಿರುವುದು, ಸಮತೋಲಿತ ಆಹಾರ ಸೇವಿಸುವುದು, ತೂಕ ನಿರ್ವಹಣೆ ಮಾಡುವುದು ಸೇರಿದಂತೆ ಮುಂತಾದ ಕ್ರಮಗಳನ್ನು ಅನುಸರಿಸಬೇಕು. ಆಧುನಿಕ ಒತ್ತಡದ ಬದುಕಿನಲ್ಲಿ ಕ್ಯಾನ್ಸರ್ ಪ್ರಮಾಣ ಹೆಚ್ಚಾಗಿದೆ. ದೇಹದಲ್ಲಿ ಜೀವಕೋಶಗಳ ಅಸಾಮಾನ್ಯ ಬೆಳವಣಿಗೆಯಿಂದಾಗುತ್ತವೆ. ಕ್ಯಾನ್ಸರನಲ್ಲಿ 200 ಪ್ರಕಾರಗಳಿವೆ. ಚರ್ಮದಲ್ಲಿ ಗಂಟು ಹಾಗೂ ಹಳದಿ ಬಣ್ಣಕ್ಕೆ ತಿರುಗುವುದು,

ತೂಕದಲ್ಲಿ ಹೆಚ್ಚಳ ಅಥವಾ ನಷ್ಟ, ಉಸಿರಾಟದ ತೊಂದರೆ, ನಿರಂತರವಾದ ಕೀಲುನೋವು, ರಕ್ತಸ್ರಾವವಾಗುವುದು ಲಕ್ಷಣಗಳಾಗಿವೆ. ಆರಂಭದಲ್ಲಿ ಇದನ್ನು ಗುರುತಿಸಿ ಚಿಕಿತ್ಸೆ ಪಡೆದರೆ ಗುಣಮುಖರಾಗಲು ಸಾಧ್ಯವಿದೆ. ಕ್ಯಾನ್ಸರ್ ರೋಗಿಗಳ ಬಗ್ಗೆ ಕೀಳರಿಮೆ ಬೇಡ. ಕಾಯಿಲೆ ಬಂದರೆ ಭಯ ಪಡದೆ, ಸೂಕ್ತ ತಪಾಸಣೆ, ಚಿಕಿತ್ಸೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ಆರೋಗ್ಯಕೇಂದ್ರದ ಸಿಬ್ಬಂದಿಗಳಾದ ಜಗನಾಥ ಗುತ್ತೇದಾರ, ಗಂಗಾಜ್ಯೋತಿ

ಗಂಜಿ, ರೇಷ್ಮಾ ನಕ್ಕುಂದಿ, ನಾಗೇಶ್ವರಿ ಮುಗಳಿವಾಡಿ, ಸಂಗಮ್ಮ ಅತನೂರ್, ಮಂಗಲಾ ಚಂದಾಪುರೆ, ಲಕ್ಷ್ಮೀ, ಶ್ರೀದೇವಿ, ಅರ್ಚನಾ, ನಾಗಮ್ಮ ಚಿಂಚೋಳಿ ಸೇರಿದಂತೆ ಮತ್ತಿತರರಿದ್ದರು.

ರೋಹಿತ್ ಲಮಾಣಿ ಕಿತ್ತೂರು ರಾಣಿ ಚೆನ್ನಮ್ಮ ವಿವಿ ಬ್ಲೂ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇದರ ವ್ಯಾಪ್ತಿಗೆ ಬರುವ ಚಿಕ್ಕೋಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ (ಜಿಎಫ್‌ಜಿಸಿ) ನವೆಂಬರ್ 2ರಂದು ನಡೆದ 'ಬೆಳಗಾವಿ ಸಿಂಗಲ್ ಝೋನ್ ಪುರುಷ/ಮಹಿಳಾ ಟೈಕ್ವಾಂಡೋ ಸ್ಪರ್ಧೆಯಲ್ಲಿ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ರೋಹಿತ್ ಲಮಾಣಿ ಪ್ರಥಮ ಸ್ಥಾನವನ್ನು ಪಡೆದುಕೊಂಡು ವಿಶ್ವವಿದ್ಯಾಲಯ ಬ್ಲೂ ಆಗಿ ಸಾಧನೆ ಮಾಡಿದ್ದಾನೆ.

ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಡಾ. ಶ್ರೀನಿವಾಸ್ ಎ. ಟಿ. ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಎಸ. ಎ. ಪಾಟೀಲ್,ಐ.ಕ್ಯೂ.ಎ.ಸಿ ಸಂಯೋಜಕ ಡಾ. ಪಿ. ಎಸ್. ಪಾಟೀಲ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಯ ಸಾಧನೆಗೆ ತಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಯಡ್ರಾಮಿ ಮುಡಿಜಟ್ಟಿಂಗೇಶ್ವರ ಜಾತ್ರೆ ಸಂಪನ್ನ



■ ಉದಯರಶ್ಮಿ ದಿನಪತ್ರಿಕೆ

ಯಡ್ರಾಮಿ: ಮಳ್ಳಿ ರಸ್ತೆಯಲ್ಲಿರುವ ದುಮ್ಮದ್ರಿ ಕ್ರಾಸ್ ಸಮೀಪದ ಸವುಳಹಳ್ಳದ (ಸೌಳ್ಹಳ್ಳ) ಸೇತುವೆಯ ಬಳಿ ಕಾಚಾಪುರ ಸೀಮೆಯ ಹೊಲವೊಂದರ ಮಧ್ಯದಲ್ಲಿರುವ ಮುಡಿಜ–ಟ್ಟಿಂಗೇಶ್ವರ ಜಾತ್ರೆ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಪ್ರತಿವರ್ಷ ದೀಪಾವಳಿ ಅಮಾವಾಸ್ಯೆಯಂದು ಈ ಜಾತ್ರೆ ನಡೆಯುತ್ತದೆ. ಕಾಚಾಪುರದಿಂದ ದೇವಸ್ಥಾನದವರೆಗೆ

ಪಲ್ಲಕ್ಕಿ, ಕಳಸ ಮತ್ತು ಡೊಳ್ಳುಮೇಳದೊಂದಿಗೆ ದೇವರ ಉತ್ಸವ ನಡೆಯಿತು.

ಮಳ್ಳಿ–ನಾಗರಹಳ್ಳಿ ದುಮ್ಮದ್ರಿ, ವಡಗೇರಿ, ಐನಾಪುರ, ಸುಂಬಡ, ಅಖಂಡಳ್ಳಿ, ಮಾಗಣಗೇರಿ, ಕುಳಗೇರಿ ಮೊದಲಾದ ಗ್ರಾಮಗಳ ಜನರು ಅತ್ಯಂತ ಭಕ್ತಿ ಭಾವದಿಂದ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಮುಖಂಡರಾದ ಗುರಣ್ಣಗೌಡ ಬಸಗೊಂಡ, ಹೊನ್ನಪ್ಪ ದೊಡ್ಡಮನಿ, ರೇವಪ್ಪ ದೊಡ್ಡಮನಿ, ಗುರುಲಿಂಗಪ್ಪಗೌಡ ಪಾಟೀಲ, ಡಾ. ಸಂತೋಷ ನವಲಗುಂದ, ಕೇಶುರಾಯಗೌಡ ಪಾಟೀಲ, ದೇವು ದ್ಯಾಮಾ, ಮಲ್ಲಿಕಾರ್ಜುನ ಸಾಲಿ, ಗೊಲ್ಲಾಳಪ್ಪ ಪತ್ತಾರ, ವೀರಭದ್ರಪ್ಪ ಪತ್ತಾರ, ದೇವು ಮಡಿವಾಳಕರ, ಬಿ.ಬಿ.ವಾರದ, ಅಂಬ–ರೀಶ ಹಲಕರ್ಟಿ, ದೊಡ್ಡಪ್ಪ ಸಜ್ಜನ, ಹಣಮಂತ ಹೊಸಮನಿ, ದೇವೀಂದ್ರ ದೊಡ್ಡಮನಿ, ಮಹಾಂತೇಶ ದೊಡಮನಿ, ದೊಡ್ಡೇಶ ವರ್ಮಾ, ಕಾಚಾಪುರ ಗ್ರಾಮಸ್ಥರು ಹಾಗೂ ಸುತ್ತಲಿನ ಗ್ರಾಮಗಳ ಭಕ್ತರು ಭಾಗವಹಿಸಿದ್ದರು.

ಬಿ.ಎಲ್.ಡಿ.ಇ ವಿದ್ಯಾರ್ಥಿಗಳ ಸಾಧನೆ

■ ಉದಯರಶ್ಮಿ ದಿನಪತ್ರಿಕೆ



ಭೀರಪ್ಪ ನಾಟೀಕಾರ ತೇಜಶ್ವಿನಿ ರಾಠೋಡ

ವಿಜಯಪುರ: ನಗರದ ಬಂಜಾರ ದೈಹಿಕ ಶಿಕ್ಷಣ ಕಾಲೇಜಿನ ಆಶ್ರಯದಲ್ಲಿ ಅ.27 ರಂದು ನಡೆದ ಕಿತ್ತೂರು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ (ಬೆಳಗಾವಿ) ಮಟ್ಟದ ಸ್ಪರ್ಧೆಯಲ್ಲಿ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಕಾಲೇಜಿನ ಪ್ರತಿಭಾವಂತ ಬಿ.ಎ. ವಿದ್ಯಾರ್ಥಿಗಳಾದ ಭೀರಪ್ಪ ನಾಟಿಕಾರ್ 110 ಮೀಟರ್ ಹರ್ಡಲ್ಸ್ (ಅಡೆತಡೆ ಓಟ) ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ. ಹಾಗೂ ತೇಜಸ್ವಿನಿ ರಾಠೋಡ್ 'ಸಿಂಗಲ್ ಝೋನ್' ಬಾಸ್ಕೆಟ್‌ಬಾಲ್ ಪಂದ್ಯಾವಳಿ ಹಾಗೂ ಆಯ್ಕೆ ಪ್ರಕ್ರಿಯೆಯಲ್ಲಿ ಯೂನಿವರ್ಸಿಟಿ ಬ್ಲೂ' ಆಗಿ ಸಾಧನೆ ಮಾಡಿದ್ದಾರೆ. ಇವರ ಈ ಸಾಧನೆಯು ಕಾಲೇ–ಜಿಗೆ ಕೀರ್ತಿ ಮತ್ತು ಗೌರವವನ್ನು ಹೆಚ್ಚಿಸಿದೆ. ಈ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಡಾ. ಶ್ರೀನಿವಾಸ್ ಎ. ಟಿ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ. ಎಸ್. ಎ. ಪಾಟೀಲ್,ಐಕ್ಯೂಎಸಿ ಸಂಯೋಜಕ ಡಾ.ಪಿ. ಎಸ್.ಪಾಟೀಲ ಕಾಲೇಜಿನ ಆಡಳಿತ ಮಂಡಳಿ ಹಾಗೂ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ನ.28ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ಇಂಡಿ-ಚಡಚಣ ತಾಲೂಕುಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆ

ವಿಜಯಪುರ: ಇಂಡಿ ಮತ್ತು ಚಡಚಣ ತಾಲೂಕುಗಳ ಸ್ಥಿರಾಸ್ತಿಗಳ ಪರಿಷ್ಕೃತ ಮಾರುಕಟ್ಟೆ ಮಾರ್ಗಸೂಚಿ ದರಗಳ ಕರಡು ಪಟ್ಟಿಯನ್ನು ಪ್ರಕಟಿಸಲಾಗಿದೆ.

ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ, ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳು–2013ರ ನಿಯಮ 6(1)ರ ಅನ್ವಯ 2026–27ನೇ ಸಾಲಿನ ಸ್ಥಿರಾಸ್ತಿಗಳ ಮಾರುಕಟ್ಟೆ ಮಾರ್ಗಸೂಚಿ ದರಗಳನ್ನು ನಿಗದಿತ ಮಾರ್ಗಸೂಚಿಗಳ ಪ್ರಕಾರ ಪರಿಷ್ಕರಿಸಿ ಕರಡು ಪಟ್ಟಿ ಸಿದ್ಧಪಡಿಸಲಾಗಿದೆ. ಈ ಕರಡು ಪ್ರತಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಇಂಡಿ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ.

ಪರಿಷ್ಕೃತ ದರಗಳ ಕುರಿತು ಸಾರ್ವಜನಿಕರು ತಮ್ಮ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ನವೆಂಬರ್ 9ರಿಂದ 28ರವರೆಗೆ ಇಂಡಿ ಉಪ ನೋಂದಣಾಧಿಕಾರಿಗಳು ಹಾಗೂ ಮಾರುಕಟ್ಟೆ ಮೌಲ್ಯನಿರ್ಣಯ ಉಪಸಮಿತಿಯ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ

ಮಾರ್ಕಬ್ಬಿನಹಳ್ಳಿ: ಪ್ರಜಾಸೇವೆ ಆಂದೋಲನ ಸಭೆಗೆ ಚಾಲನೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಪ್ರಜಾಸೇವೆ ಆಂದೋಲನದ ಮೂಲಕ ಗ್ರಾಮಸ್ಥರು ತಮ್ಮ ಕುಂದುಕೊರತೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಗ್ರೇಡ್–2 ತಹಶೀಲ್ದಾರ್ ಎಮ್.ಜಿ. ಬಿರಾದಾರ, ಹೇಳಿದರು.

ತಾಲ್ಲೂಕಿನ ಮಾರ್ಕಬ್ಬಿನಹಳ್ಳಿ ಗ್ರಾಮದಲ್ಲಿ ಶನಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವಿಜಯಪುರ, ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ ದೇವರಹಿಪ್ಪರಗಿ ಅಡಿಯಲ್ಲಿ ಜರುಗಿದ ಪ್ರಜಾ ಸೇವೆ ಆಂದೋಲನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಅಗತ್ಯ ಮಾಹಿತಿ ಸಂಗ್ರಹಿಸಬೇಕು ಎಂದರು.

ಸಭೆಯಲ್ಲಿ ವಿವಿಧ ಇಲಾಖೆಯ ಕುಂದುಕೊರತೆಗಳ ಕುರಿತು ರೈತರು ಮತ್ತು ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿದರು.

ಒಟ್ಟು 22 ಅರ್ಜಿಗಳು ಸ್ವೀಕೃತವಾಗಿದ್ದು ಅವುಗಳಲಿ ಕೆಲವು ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯರ್ಥ ಪಡಿಸಲಾಯಿತು. ಬಾಕಿ ಉಳಿದ ಅರ್ಜಿಗಳನ್ನು ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದ ಇಲಾಖೆಗಳಿಗೆ ವರ್ಗಾಯಿಸಲಾಯಿತು.

ತಾಲ್ಲೂಕು ಪಂಚಾಯಿತಿ ಇಓ ಭಾರತಿ ಚೆಲುವಯ್ಯ , ಶಿರಸ್ತೇದಾರ ಸುರೇಶ ಮ್ಯಾಗೇರಿ, ಸಿಂದಗಿ ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕ ಎಸ್.ಆರ್.ಅಗಸಬಾಳ, ಬಸವನ ಬಾಗೇವಾಡಿ ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿ ರಾಮು ರಾಠೋಡ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಇದ್ದರು.

ಸಿಂದಗಿಯಲ್ಲಿ 37 ದಿನಗಳಿಂದ ನಡೆಯುತ್ತಿರುವ ಧರಣಿಯಲ್ಲಿ ಆಲಮೇಲ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಆಗ್ರಹ

371(ಜೆ) ಮೀಸಲಾತಿ ನೀಡಲು ಸರಕಾರ ಮುಂದಾಗಬೇಕು

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಶಿಕ್ಷಣ ಉದ್ಯೋಗ ಆರೋಗ್ಯ ಮೂಲ ಸೌಕರ್ಯ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ರಾಜ್ಯದ ಇತರೆ ಭಾಗಗಳೊಂದಿಗೆ ವಿಜಯಪುರ ಜಿಲ್ಲೆಯ ಸಂಪೂರ್ಣವಾಗಿ ಅಭಿವೃದ್ಧಿ ಕುಂಟಿತ ಹೊಂದಿದೆ ಕಾರಣ 371 ಮೀಸಲಾತಿ ನೀಡಲು ಸರಕಾರ ಮುಂದಾಗಬೇಕು ಎಂದು ಆಲಮೇಲ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಆಗ್ರಹಿಸಿದರು.

ನಗರದ ಬಸವೇಶ್ವರ ಸರ್ಕಲ್ ಹತ್ತಿರ, ಗೋಕಾಕ ಚಳವಳಿಯ ರೂವಾರಿ ಶ್ರೀ ರೇ.ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371 (ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ ಶನಿವಾರ 37 ದಿನಗಳಿಂದ ನಡೆದ ಧರಣಿಯಲ್ಲಿ ಶಿವಾಚಾರ್ಯರು ಒಕ್ಕೂಟದೊಂದಿಗೆ ಬೆಂಬಲಿಸಿ ಅವರು ಮಾತನಾಡಿದರು. ಸಿಂದಗಿ ಸಾರಂಗಮಠದ

ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಮಾತನಾಡಿ, ವಿಜಯಪುರ ಜಿಲ್ಲೆಯು ಎಲ್ಲ ರೀತಿಯಿಂದಲೂ ಹಿಂದೆ ಬಿದ್ದಿದೆ. ಸದ್ಯ ನಡೆಯುವ ಹೋರಾಟ ಸೌಲಭ್ಯ ಸಿಗುವವರೆಗೂ ನಿಲ್ಲುವುದಿಲ್ಲ. ಸರ್ಕಾರ ಮಧ್ಯ ಪ್ರವೇಶಿಸಿ ಕಲ್ಯಾಣ ಕರ್ನಾಟಕದಲ್ಲಿ ಹೆಸರು ಸೇರಿಸಿ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ , ಮಾಣಗೇರಿ ವಿಶ್ವರಾಧ್ಯ ಶಿವಾಚಾರ್ಯರು, ಹತ್ತಳ್ಳಿ ಗುರುಪಾದಯ್ಯ ಶಿವಾಚಾರ್ಯರು, ಯಂಕಂಚಿ ರುದ್ರಮುನಿ ಶಿವಾಚಾರ್ಯರು, ಹಿರೂರ ಜಯಸಿದ್ದೇಶ್ವರ ಶಿವಾಚಾರ್ಯರು, ತಡವಲಗ ರಾಚೋಟೇಶ್ವರ

ಶಿವಾಚಾರ್ಯರು, ಕನ್ನೊಳ್ಳಿ ಸಿದ್ದಲಿಂಗ ಶಿವಾಚಾರ್ಯರು, ರೂಡಗಿ ಮಡಿವಾಳ ಸ್ವಾಮಿಗಳು, ಆಲಮೇಲ ಸಂಗನಬಸವ ಶಿವಾಚಾರ್ಯರು, ತಾರಪೂರ ಗುರುಲಿಂಗೇಶ್ವರ ಶಿವಾಚಾರ್ಯರು, ಚಡಚಣ ಷಡಕ್ಷರಿ ಸ್ವಾಮಿಗಳು, ಕಲಕೇರಿ ಮಡಿವಾಳೇಶ್ವರ ಶಿವಾಚಾರ್ಯರು, ಅಗರಖೇಡ ಪ್ರಭುಲಿಂಗ ಸ್ವಾಮಿಗಳು, ಜೈನಾಪುರ ರೇಣುಕ ಶಿವಾಚಾರ್ಯರು, ಹಾವಿನಾಳ ವಿಜಯಮಹಾಂತೇಶ್ವರ ಶಿವಾಚಾರ್ಯರು, ನೀಲೂರ ಶಿವರುದ್ರ ಶಿವಾಚಾರ್ಯರು, ಗೋಳಸಾರ ಅಭಿನವ ಪುಂಡಲಿಂಗ ಸ್ವಾಮಿಗಳು, ಭಂಥನಾಳ ಸಂಗನಬಸವದೇವರು, ಕಡಣಿ ರೇವಣಸಿದ್ದ ಶಿವಾಚಾರ್ಯರು, ಬೋರಗಿ–ಪುರದಾಳ ಮಹಾಲಿಂಗೇಶ್ವರ ಸ್ವಾಮಿಗಳು, ಕರಬಂಟನಾಳ ಶಿವಕುಮಾರ ಸ್ವಾಮಿಗಳು, ಮುಳವಾಡ ವಿರುಪಾಕ್ಷ ಶಿವಾಚಾರ್ಯರು, ಢವಳಗಿ ಘನಮರೇಶ್ವರ ಸ್ವಾಮಿಗಳು, ಕುಂಟೋಜಿ ರುದ್ರಮುನಿ ಸ್ವಾಮಿಗಳು, ಹೋರಾಟ ಸಮಿತಿಯ ಅಶೋಕ ಅಲ್ಲಾಪೂರ, ವಕೀಲ ದಾನಪ್ಪಗೌಡ ಚನಗೊಂಡ, ಶೈಲಜಾ ಸ್ಥಾವರಮಠ, ಗುರುರಾಜ್ ಪಡಶೆಟ್ಟಿ, ಸಿದ್ದರಾಮ ಪಾಟೀಲ, ಸಾಯಬಣ್ಣ ದೇವರಮನಿ, ಪಂಡಿತ ಯಂಪುರೆ, ಎಂ. ಎಂ. ಹಂಗರಗಿ, ಸಂಗಣ್ಣ ಬ್ಯಾಕೋಡ, ಆನಂದ ಶಾಬಾದಿ, ಶಂಕರ ಮಲ್ಲೇದ, ಸಿದ್ದು ಕಡಗಂಚಿ, ಅಂಬರೀಶ್ ಸುಣಗಾರ, ಆರೀಫ ಅಂತರಗಂಗಿ, ಸತೀಶ ಕೌಲಗಿ, ಚಿಕ್ಕಸಿಂದಗಿ ಶಂಕರಲಿಂಗ ಹೆಬ್ಬಾಳ, ಪರಮಾನಂದ ಬಗಲಿ, ಬಾಬು ಓಲೇಕಾರ ಇದ್ದರು.

ಕೊಡಗಿನಲ್ಲಿ ನಡೆದ ರಾಜ್ಯ ಮಟ್ಟದ ಕ್ರಿಕೆಟ್ ಟೂರ್ನಿ । ಬಾಗಲಕೋಟೆ ತೃತೀಯ, ಚಿಕ್ಕಬಳ್ಳಾಪುರ ಚತುರ್ಥ ಸ್ಥಾನ

ಕೊಡಗು–ಮಂಡ್ಯ ತಂಡಗಳು ಜಂಟಿ ಚಾಂಪಿಯನ್

■ ಉದಯರಶ್ಮಿ ದಿನಪತ್ರಿಕೆ



ಕೊಡಗು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲೂಜೆ) ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಎರಡು ದಿನಗಳ ಕಾಲ ನಡೆದ ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೊಡಗು ಹಾಗೂ ಮಂಡ್ಯ ತಂಡಗಳು ಜಂಟಿ ಚಾಂಪಿಯನ್ ಆಗಿ ಹೊರಹೊಮ್ಮಿವೆ.

ಮಡಿಕೇರಿ ನಗರದ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ನಡೆದ ಪಂದ್ಯಾವಳಿಯಲ್ಲಿ ಕೊಡಗು ಹಾಗೂ ಮಂಡ್ಯ ತಂಡಗಳು ಜಂಟಿ ಚಾಂಪಿಯನ್ ಪ್ರಶಸ್ತಿಯನ್ನು ಹಂಚಿಕೊಂಡವು. ಪ್ರಥಮ ಮತ್ತು ದ್ವಿತೀಯ ಬಹುಮಾನಕ್ಕೆ ನಿಗಧಿಯಾಗಿದ್ದ 1.50 ಲಕ್ಷ ನಗದು ಬಹುಮಾನವನ್ನು ಎರಡು ತಂಡಗಳಿಗೆ ಸಮಾನವಾಗಿ ಹಂಚಿಕೆ ಮಾಡಲಾಯಿತು.

ರಾಜ್ಯಮಟ್ಟದ ಪತ್ರಕರ್ತರ ಕ್ರಿಕೆಟ್ ಕ್ರೀಡಾಕೂಟದಲ್ಲಿ ಕೊಡಗು ಹಾಗೂ ಮಂಡ್ಯ ತಂಡಗಳು ಜಂಟಿಯಾಗಿ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಪಂದ್ಯಾವಳಿಗೆ ಮೆರುಗು ನೀಡಿದ್ದು ವಿಶೇಷ. ಮಳೆಯ ಕಾರಣದಿಂದ ನಲ್ ಪಂದ್ಯ ಆಡಿಸಲು ಸಾಧ್ಯವಾಗಲಿಲ್ಲ. ಫೀಲ್ಡ್ ಸುತ್ತಲೂ ಕಾರುಗಳನ್ನು ನಿಲ್ಲಿಸಿ ಅವುಗಳ ಲೈಟ್‌ನಲ್ಲಿ ಬಾಲ್ ಔಟ್ ಪ್ರಕ್ರಿಯೆ ಮೂಲಕ ಚಾಂಪಿಯನ್ ನಿರ್ಧ–ರಿಸಲಾಯಿತು. ಒಂದು ಬಾಲ್ ಔಟ್ ಮಾಡಿದ ಮಂಡ್ಯ ತಂಡಕ್ಕೆ ಛಾಂಪಿಯನ್ ಟ್ರೋಫಿ ನೀಡಲಾಯಿತು.

ಬಾಗಲಕೋಟೆ ತಂಡವು ತೃತೀಯ ಹಾಗೂ ಚಿಕ್ಕಬಳ್ಳಾಪುರಚತುರ್ಥಬಹುಮಾನವನ್ನುಪಡೆದುಕೊಂಡವು. ಸರಣಿ ಶ್ರೇಷ್ಠ, ಶ್ರೇಷ್ಠ ಬೋಲರ್, 6 ಮ್ಯಾನ್ ದಿ ಮ್ಯಾಚ್ ಪ್ರಶಸ್ತಿಗಳು ಬಾಗಲಕೋಟೆ ತಂಡದ ಪಾಲಾಯಿತು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಪೊನ್ನಣ್ಣ, ಶಾಸಕರಾದ ಡಾ.ಮಂತರ್ ಗೌಡ, ನಿಕಟಪೂರ್ವ ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ರಿಪಬ್ಲಿಕ್ ನೆಟ್ ವರ್ಕ್ ಅಧ್ಯಕ್ಷ ಚೇರಂಡ ಕಿಶನ್ ಮಾದಪ್ಪ, ಉದ್ಯಮಿಗಳಾದಎಡಿಕೇರಿಪ್ರಸನ್ನಮಾತನಾಡಿ,ರಾಜ್ಯಮಟ್ಟದ ಕ್ರೀಡಾಕೂಟ ಸಂಘಟಿಸಿದ್ದಕ್ಕೆ ಅಭಿನಂದನೆ ಸಲ್ಲಿಸಿದರು.

ಕೆಪಿಸಿಸಿ ವಕ್ತಾರ ಲಕ್ಷ್ಮಣ್, ಕೆಯುಡಬ್ಲೂ undefinede ರಾಜ್ಯ ಪದಾಧಿಕಾರಿಗಳಾದ ಅಜ್ಜಮಾಡ ಕುಟ್ಟಪ್ಪ, ಮತ್ತಿಕೆರೆ ಜಯರಾಂ, ಜಿ.ಸಿ.ಲೋಕೇಶ, ಸೋಮಶೇಖರ ಕೆರಗೋಡು, ಪುಂಡಲೀಕ ಬಾಳೋಜಿ, ವಾಸುದೇವ ಹೊಳ್ಳ, ಕೊಡಗು ಜಿಲ್ಲಾ ಘಟಕ ಅಧ್ಯಕ್ಷ ಅನು ಕಾರ್ಯಪ್ಪ, ಪ್ರಧಾನ ಕಾರ್ಯದರ್ಶಿ ರಾಕೇಶ್, ರಾಜ್ಯ ಸಮಿತಿ ಸದಸ್ಯೆ ಸವಿತಾ ರೈ ಮತ್ತಿತರರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರು, ತಂಡಗಳ ಆಟಗಾರರು ಹಾಗೂ ವಿವಿಧ ಜಿಲ್ಲೆಗಳ ಪತ್ರಕರ್ತರು ಭಾಗವಹಿಸಿದ್ದರು.

ಪಂದ್ಯಾವಳಿಯಲ್ಲಿ 24 ತಂಡಗಳು ಸೆಣೆಸಿದ್ದವು.

ನ.28ರವರೆಗೆ ಸಾರ್ವಜನಿಕರಿಂದ ಸಲಹೆ, ಆಕ್ಷೇಪಣೆ ಸಲ್ಲಿಸಲು ಅವಕಾಶ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ-ತಾಳಿಕೋಟೆ ತಾಲೂಕುಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆಗೆ ಕರಡು ಪಟ್ಟಿ ಪ್ರಕಟಣೆ

ವಿಜಯಪುರ: 2026–27ನೇ ಸಾಲಿಗೆ ಮುದ್ದೇಬಿಹಾಳ ಉಪ ನೋಂದಣಿ ಕಚೇರಿ ವ್ಯಾಪ್ತಿಯ ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕುಗಳ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆಗೆ ಸಂಬಂಧಿಸಿದಂತೆ ಕರಡು ಪಟ್ಟಿಯನ್ನು ಸಿದ್ಧಪಡಿಸಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕುಗಳ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ನಿರ್ಧರಣಾ ಉಪಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಆಧಾರದ ಮೇಲೆ ಕರಡು ಪಟ್ಟಿ ಸಿದ್ಧಪಡಿಸಲಾಗಿದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಸ್ಥಿರಾಸ್ತಿಗಳ ಪರಿಷ್ಕೃತ ಮಾರ್ಗಸೂಚಿ ಬೆಲೆ ನಿಗದಿಪಡಿಸುವ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಕರಡು ಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರು ತಮ್ಮ ಸಲಹೆ, ಆಕ್ಷೇಪಣೆ ಹಾಗೂ ತಿದ್ದುಪಡಿ ಸಲ್ಲಿಸಲು ನವೆಂಬರ್ 9ರಿಂದ 28ರವರೆಗೆ ಅವಕಾಶ ಕಲ್ಪಿಸಲಾಗಿದೆ. ನಿಗದಿತ ಅವಧಿಯೊಳಗೆ ಮುದ್ದೇಬಿಹಾಳ ಉಪ ನೋಂದಣಾಧಿಕಾರಿಗಳ ಕಚೇರಿಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಮುದ್ದೇಬಿಹಾಳ ಉಪ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿ ಸಂಶೋಧನಾ ಆಸಕ್ತಿ ಬೆಳೆಸಲು ವಿಜ್ಞಾನ ಸಮಾವೇಶ ಸಹಕಾರಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ಸಂಶೋಧನಾ ಆಸಕ್ತಿ ಹಾಗೂ ಸೃಜನಶೀಲ ಚಿಂತನೆಯನ್ನು ಬೆಳೆಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಹಾಗೂ ವಿಜಯಪುರ ಜಿಲ್ಲಾ ಪಂಚಾಯಿತಿಯ ಸಹಯೋಗದಲ್ಲಿ ಆಯೋಜಿಸಿದ್ದ 2026–27ನೇ ಸಾಲಿನ ಜಿಲ್ಲಾಮಟ್ಟದ ಮಕ್ಕಳ ವಿಜ್ಞಾನ ಸಮಾವೇಶವು ನಗರದ ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಶನಿವಾರ ಯಶಸ್ವಿಯಾಗಿ ನಡೆಯಿತು.

ಅಗಸ್ತ್ಯ ವಿಜ್ಞಾನ ಕೇಂದ್ರದಲ್ಲಿ ಜಿಲ್ಲಾಮಟ್ಟದ ಮಕ್ಕಳ ವಿಜ್ಞಾನ ಸಮಾವೇಶ ಯಶಸ್ವಿ; ನೂರಾರು ವಿದ್ಯಾರ್ಥಿಗಳಿಂದ ವೈಜ್ಞಾನಿಕ ಮಾದರಿ, ನವೀನ ಆಲೋಚನೆಗಳ ಪ್ರದರ್ಶನ

ಕಾರ್ಯಕ್ರಮದಲ್ಲಿ ಮಾತನಾಡಿದ ಗೀತಾ ಪಾಟೀಲ್ ಹಾಗೂ ದಿಲೀಪ್ ಕಾಂಬಳೆ ಅವರು, ವಿಜ್ಞಾನವು ಕೇವಲ ಪಠ್ಯಪುಸ್ತಕಗಳಿಗೆ ಸೀಮಿತವಾಗದೆ ದೈನಂದಿನ ಜೀವನದಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಪ್ರಜ್ಞಾವಂತ ಚಿಂತನೆಯನ್ನು ಬೆಳೆಸುವ ಸಾಧನವಾಗಬೇಕು ಎಂದು ಹೇಳಿದರು. ಜಾಗತೀಕರಣ, ಪರಿಸರ ಮಾಲಿನ್ಯ ಹಾಗೂ ಅರಣ್ಯನಾಶದಿಂದ ಪರಿಸರದ ಸಮತೋಲನ ಹದಗೆಡುತ್ತಿದೆ. ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಜೀವವೈವಿಧ್ಯತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಸಂರಕ್ಷಣೆಗೆ ಆದ್ಯತೆ ನೀಡಬೇಕು. ತಂತ್ರಜ್ಞಾನವು ಮಾನವಕುಲದ ಪ್ರಗತಿಗೆ ಪೂರಕವಾಗಿರಬೇಕೇ ಹೊರತು ವಿನಾಶಕ್ಕೆ ಕಾರಣವಾಗಬಾರದು. ಪ್ರಾಚೀನ ಸಾಂಪ್ರದಾಯಿಕ ಜ್ಞಾನ ಮತ್ತು ಆಧುನಿಕ ವಿಜ್ಞಾನವನ್ನು ಸಮನ್ವಯಗೊಳಿಸುವುದು ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಉಪ ನಿರ್ದೇಶಕರ ಕಾರ್ಯಾಲಯದ ವಿಜ್ಞಾನ ವಿಷಯ ಪರಿವೀಕ್ಷಕ ಶಂಕರ ತಳ್ಳೊಳ್ಳಿ,ಅಂಜುಮನ್ ಪದವಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸಲೀಂ ದೇಸಾಯಿ, ಅಗಸ್ತ್ಯ ಪ್ರತಿಷ್ಠಾನದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಸತೀಶ್ ಗೋಡಕಿಂಡಿ ಹಾಗೂ ಜಿಲ್ಲಾ ಪಂಚಾಯಿತಿಯ ಜಿಲ್ಲಾ ನೈಸರ್ಗಿಕ ಸಂಪನ್ಮೂಲ ದತ್ತಾಂಶ ನಿರ್ವಹಣಾ ವ್ಯವಸ್ಥೆಯ ಸಂಯೋಜಕಿ ಚೆನ್ನಮ್ಮ ಅಗಳನ್ನವರ ಉಪಸ್ಥಿತರಿದ್ದರು. ಸಮಾವೇಶದ ಸಮಿತಿ ಸದಸ್ಯರು ಹಾಗೂ ತೀರ್ಪುಗಾರರಾಗಿ ಸರ್ಕಾರಿ ಪ್ರೌಢಶಾಲೆ ಅರಕೇರಿಯ ಆರ್.ಎಸ್. ಝುಳಕಿ, ಹೆಬ್ಬಾಳಟ್ಟಿಯ ಸರ್ಕಾರಿ ಪ್ರೌಢಶಾಲೆಯ ಸಂದೀಪ್ ದೇಶಪಾಂಡೆ, ಮಮದಾಪುರ ಕರ್ನಾಟಕ ಪಬ್ಲಿಕ್ ಶಾಲೆಯ ಎಂ.ಜಿ. ಕೋರಿ, ಸಿದ್ದನಾಥ ಸರ್ಕಾರಿ ಪ್ರೌಢಶಾಲೆಯ ಶಶಿಧರ ಕುಂಬಾರ, ಮುಳವಾಡದ ಮಲ್ಲಿಕಾರ್ಜುನ ಪ್ರೌಢಶಾಲೆಯ ಧರು ಎಸ್.ಕೆ., ರಾಂಪುರ ಸರ್ಕಾರಿ ಪ್ರೌಢಶಾಲೆಯ ನಾಗೇಂದ್ರ ರಜಪೂತ್ ಹಾಗೂ ಅಗಸ್ತ್ಯ ಪ್ರತಿಷ್ಠಾನದ ಚಂದ್ರಶೇಖರ ಅಣಮಿ ಭಾಗವಹಿಸಿ ವಿದ್ಯಾರ್ಥಿಗಳ ವೈಜ್ಞಾನಿಕ ಮಾದರಿಗಳನ್ನು ಮೌಲ್ಯಮಾಪನ ಮಾಡಿದರು. ಜಿಲ್ಲೆಯ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಹಾಗೂ ಮಾರ್ಗದರ್ಶಿ ಶಿಕ್ಷಕರು ಸಮಾವೇಶದಲ್ಲಿ ಪಾಲ್ಗೊಂಡು ತಮ್ಮ ವೈಜ್ಞಾನಿಕ ಮಾದ–ರಿಗಳು ಮತ್ತು ನವೀನ ಆಲೋಚನೆಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ಸಂಶೋಧನಾ ಆಸಕ್ತಿ, ಸೃಜನಶೀಲತೆ ಹಾಗೂ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಪರಿಹರಿಸುವ ಸಾಮರ್ಥ್ಯ ಬೆಳೆಸುವಲ್ಲಿ ಸಮಾವೇಶ ಮಹತ್ವದ ವೇದಿಕೆಯಾಯಿತು ಎಂದು ಜಿಲ್ಲಾ ಪಂಚಾಯಿತಿಯ ಪ್ರಕಟಣೆ ತಿಳಿಸಿದೆ.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR